ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 9 | ಸಂಚಿಕೆ 9 | ಮಾರ್ಚ್ 1, 1987 | ಬೆಲೆ 1 ರೂ.

ಒಳಗಿನ ಪುಟಗಳಲ್ಲಿ

ಬಜೆಟ್! ಬಜೆಟ್!! ಪುಟ–5
★ ಕಾರ್ಲ್ ಮಾರ್ಕ್ಸ್ ಹಾಗೂ ನಮ್ಮ ಬಜೆಟ್‌ಗಳು
★ ಬಜೆಟ್‌ಗಳನ್ನು ಅರ್ಥಮಾಡಿಕೊಳ್ಳುವುದು ಹೇಗೆ?
ಕಾರ್ಮಿಕ ರಂಗ ಪುಟ–2
★ ಕಾರ್ಮಿಕರಿಗೆ ಅನ್ಯಾಯ–ಸಿ.ಐ.ಟಿ.ಯು. ರಾಜ್ಯ ಮಂಡಳಿ
★ ಒಂದೂವರೆ ವರ್ಷ ಮೀರಿದ ಹೋಟೆಲ್ ಕಾರ್ಮಿಕರ ಹೋರಾಟ
ಲೋಕ ಸಂಚಾರ ಪುಟ–7
★ ವ್ಯಾಪಾರೋದ್ಯಮವಾದ ಭಯೋತ್ಪಾದನೆ
★ ಆಲ್ಬೇನಿಯಾದಲ್ಲೇನು ನಡೆದಿದೆ?
ಫಿಲಿಪ್ಪೈನ್ಸ್‌ನಲ್ಲಿ ವರ್ಗ ಸಂಘರ್ಷ ಪುಟ–3
★ ಕಲ್ಕತ್ತಾಕ್ಕೆ ಮತ್ತೆ ಸಿ.ಪಿ.ಐ.[ಎಂ] ಮೇಯರ್–ಇತ್ಯಾದಿ
ಈ ವಾರ, ಅಲ್ಲಲ್ಲಿ ಏನೇನು? ನಿಮಗಿದು ಗೊತ್ತೇ? ಮೊದಲಾದ ಸ್ಥಿರಶೀರ್ಷಿಕೆಗಳು

ಎಪ್ರಿಲ್ 21 ರಂದು ರಾಜ್ಯವ್ಯಾಪೀ ಮುಷ್ಕರ - ಸಿಐಟಿಯು ಕರೆ

ನಮ್ಮ ರಾಜ್ಯದಲ್ಲಿ ಜನತಾ ಸರಕಾರ ಅಧಿಕಾರಕ್ಕೆ ಬಂದರೂ ಕೂಡ ಕಾಂಗ್ರೆಸ್ಸಿನ ಹಾಗೆಯೇ ಕೈಗಾರಿಕೋದ್ಯಮಿಗಳ ಪರವಾದ, ಕಾರ್ಮಿಕರ ವಿರೋಧಿಯಾದ ನೀತಿಯನ್ನು ಅನುಸರಿಸುತ್ತಲೇ ಬಂದಿದೆ. ಹಿಂದಿನ ಸರಕಾರದ ಹಾಗೆ ದಿನ ಬೆಳಗಾದಾಗಲೆಲ್ಲ ಕಾರ್ಮಿಕರ ಮೇಲೆ ಗುಂಡು ಹಾರಿಸುವುದನ್ನು ಬಿಟ್ಟರೆ ಬೇರೆ ಯಾವ ವಿಧದಲ್ಲಿಯೂ ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸಲಿಕ್ಕೆ ಮುಂದೆ ಬರುತ್ತಿಲ್ಲ.

ರಾಜ್ಯದ ಎಲ್ಲಾ ಕಡೆ ಕಾರ್ಮಿಕ ಇಲಾಖೆಯ ಅಧಿಕಾರಿಗಳ ಭ್ರಷ್ಟಾಚಾರ, ಲಂಚಗುಳಿತನ, ಅಧಿಕಾರಿಗಳು ಮಾಲೀಕರ ಕಾನೂನು ಸಲಹೆಗಾರರಾಗಿ ವರ್ತಿಸುವುದು, ಕಾನೂನುಗಳನ್ನು ಜಾರಿಮಾಡದಿರುವುದು, ತಪ್ಪಿತಸ್ಥ ಮಾಲೀಕರ ವಿರುದ್ಧ ಮೊಕದ್ದಮೆ ಹೂಡದಿರುವುದು, ಕಾರ್ಮಿಕ ನ್ಯಾಯಾಲಯಗಳ ಕಾರ್ಯನಿರ್ವಹಣೆ, ಸಿಬ್ಬಂದಿಯ ಕೊರತೆ, ಅವಾರ್ಡ್‌ಗಳನ್ನು ಜ್ಯಾರಿಮಾಡದಿರುವುದು, ಕಾರ್ಮಿಕರ ಕೇಸುಗಳನ್ನು ಸಕಾಲದಲ್ಲಿ ನಿರ್ಧರಿಸದಿರುವುದು– ಇವು ಕೆಲವು ಜನತಾ ಸರ್ಕಾರದ ಕಾರ್ಮಿಕವಿರೋಧಿ ನೀತಿಯ ರೂಪಗಳು

ಕನಿಷ್ಠ ವೇತನ ಕಾಯಿದೆಗೊಳಪಡುವ ಬೀಡಿ, ಹಂಚು, ಪ್ಲಾಂಟೇಶನ್ ಮೊದಲಾದ ಕೈಗಾರಿಕೆಗಳಲ್ಲಿಯ ಲಕ್ಷಾವಧಿ ಕಾರ್ಮಿಕರಿಗೆ ನ್ಯಾಯಯುತವಾದ ಕನಿಷ್ಟ ವೇತನ, ತುಟ್ಟಿಭತ್ತೆ ನಿರ್ಧರಿಸುವುದರಲ್ಲಿ ವಿಫಲಗೊಂಡಿದೆ. ಮೈಸೂರಿನ ಕೆ. ಆರ್. ಮಿಲ್ ಹಾಗೆಯೇ ರಾಜ್ಯದ ವಿವಿಡೆಗಳಲ್ಲಿ ಮುಚ್ಚಲ್ಪಟ್ಟಿರುವ ಸಾವಿರಾರು ಮಧ್ಯಮ, ಸಣ್ಣ ಕಾರ್ಖಾನೆಗಳ ಕಾರ್ಮಿಕರೆಲ್ಲ ಕೆಲಸವಿಲ್ಲದೆ ಬೀದಿಪಾಲಾಗಿದ್ದರೂ, ಕಾರ್ಖಾನೆಗಳ ಪುನರಾರಂಭಕ್ಕೆ ಯಾವುದೇ ಪ್ರಯತ್ನ ನಡೆದಿಲ್ಲ. ಹೋಟೇಲ್, ಮುನಿಸಿಪಲ್ ಕೆಲಸಗಾರರು ಮುಷ್ಕರ ಹೂಡಿದರೂ ಸಮಸ್ಯೆ ಬಗೆಹರಿಸಲ್ಪಡುತ್ತಿಲ್ಲ.

ಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಜನತಾ ಸರಕಾರಕ್ಕೆ ಸಿ.ಐ.ಟಿ.ಯು. ರಾಜ್ಯ ಕೇಂದ್ರ ಮನವಿಗಳನ್ನು ಸಲ್ಲಿಸುತ್ತಿದ್ದರೂ ಸರಕಾರ ಕಿವುಡುತನ ಪ್ರದರ್ಶಿಸುತ್ತಿದೆ.

ಕಳಸ ಮತ್ತಿತರ ಪ್ರದೇಶಗಳಲ್ಲಿ ಪೋಲೀಸರು ಸಿ.ಐ.ಟಿ.ಯು. ಮುಖಂಡರು ಮತ್ತು ಕಾರ್ಮಿಕರ ಮೇಲೆ ದೌರ್ಜನ್ಯ ನಡೆಸಿ ಸುಳ್ಳು ಖಟ್ಲೆ ಹಾಕುತ್ತಿದ್ದಾರೆ

ಹರಿಹರದಲ್ಲಿ ಫೆಬ್ರವರಿ 21–22 ರಂದು ಸೇರಿದ ಸಿ.ಐ.ಟಿ.ಯು. ರಾಜ್ಯ ಮಂಡಳಿ ಸಭೆ ಕರ್ನಾಟಕ ಸರಕಾರದ ಕಾರ್ಮಿಕ ವಿರೋಧಿ ನೀತಿಯ ವಿರುದ್ಧವಾಗಿ ರಾಜ್ಯವ್ಯಾಪಿ ಚಳುವಳಿ ನಡೆಸಿ ಎಪ್ರಿಲ್ 21ರಂದು ಸಿ.ಐ.ಟಿ.ಯು. ನೇತೃತ್ವದ ಕಾರ್ಮಿಕ ಸಂಘಗಳು ಒಂದು ದಿವಸ ರಾಜ್ಯವ್ಯಾಪಿ ಮುಷ್ಕರ ಹೂಡಬೇಕೆಂದು ಕರೆ ಕೊಟ್ಟಿದೆ..

ಅದರ ಪೂರ್ವಭಾವಿ ತಯಾರಿಯಾಗಿ ಮಾರ್ಚಿ 12ರಿಂದ ಸಹಿ ಸಂಗ್ರಹ ಚಳುವಳಿ, ಒಂದು ಲಕ್ಷ ಸಹಿಗಳಿರುವ ಮನವಿಯನ್ನು ಮಾರ್ಚ 26ರಂದು ಶಾಸನ ಸಭೆಯ ಸ್ಪೀಕರ್‌ಗೆ ಅರ್ಪಿಸುವುದು, ಅದೇ ದಿವಸ ರಾಜ್ಯಾದ್ಯಂತ ಕಾರ್ಮಿಕ ಇಲಾಖೆಯ ಕಛೇರಿಗಳ ಮುಂದೆ ಧರಣಿ ಮತ್ತು ಸಭೆ ನಡೆಸಬೇಕೆಂದು ನಿರ್ಣಯ ಮಾಡಲಾಗಿದೆ.

ಜನತಾ ಸರಕಾರದ ಕಾರ್ಮಿಕ ವಿರೋಧಿ ನೀತಿಯಲ್ಲಿ ಬದಲಾವಣೆ ತರುವಂತೆ ಮಾಡಲು ಈ ಎಲ್ಲಾ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಬೇಕೆಂದು ಸಿ.ಐ.ಟಿ.ಯು. ರಾಜ್ಯ ಸಮಿತಿ ಅಧ್ಯಕ್ಷ ಎನ್. ಸೂರ್ಯನಾರಾಯಣ ರಾವ್ ಮತ್ತು ಪ್ರ. ಕಾರ್ಯದರ್ಶಿ ಸಿ.ನಂಜುಂಡಪ್ಪನವರು ಕರೆನೀಡಿದ್ದಾರೆ.

ರಾಷ್ಟ್ರಪತಿಗಳ ಭಾಷಣ ಎಂಬ ವಾರ್ಷಿಕ ಕಸರತ್ತು

ಸಂಸತ್ತಿನ ಬಜೆಟ್ ಅಧಿವೇಶನವನ್ನು ಉದ್ಘಾಟಿಸುತ್ತಿದ್ದ ರಾಷ್ಟ್ರಪತಿ ಜೇಲ್‌ಸಿಂಗ್ ಅವರ ಭಾಷಣ ಕಳೆದ ಒಂದು ವರ್ಷದಲ್ಲಿ ದೇಶ ಎದುರಿಸುತ್ತ ಬಂದಿರುವ ರಾಜಕೀಯ, ಆರ್ಥಿಕ ಸಮಸ್ಯೆಗಳ ಬೇರನ್ನು ಹಿಡಿದಲುಗಿಸಲು ಯತ್ನ ಮಾಡದೆ ವಾಸ್ತವ ಪರಿಸ್ಥಿತಿಗೆ ವ್ಯತಿರಿಕ್ತವಾದ ಅಭಿಪ್ರಾಯಗಳನ್ನು ಹೊಂದಿದ ನಿರೂಪಣೆಯಾಗಿತ್ತು.

ದೇಶದ ಸಮಗ್ರತೆಗೆ ಉಂಟಾಗಿರುವ ಭೀಕರ ಅಪಾಯವನ್ನು ಉಲ್ಲೇಖಿಸುತ್ತ ವಿದೇಶಿ ಮೂಲಗಳ ಮುಖ್ಯವಾಗಿ ಪಾಕಿಸ್ತಾನದ ನಿರ್ದೇಶನ ಹಾಗೂ ಹಣತೋಟಿಗೊಳಪಟ್ಟಿರುವ ರಾಷ್ಟ್ರವಿರೋಧಿ ಮೂಲಗಳನ್ನು ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳು ಪ್ರತ್ಯೇಕಗೊಳಿಸಿ ಅವುಗಳ ಮೂಲೋಚ್ಚಾಟನೆ ಮಾಡಬೇಕೆಂದು' ಕೇಳಿಕೊಂಡಿದ್ದಾರೆ. ಹಾಗೆಯೇ ಧರ್ಮದ ಹೆಸರಿನಲ್ಲಿ ಜನರಲ್ಲಿ ತಪ್ಪು ತಿಳುವಳಿಕೆ ಉಂಟುಮಾಡುತ್ತಿರುವ ಪ್ರತಿಗಾಮಿ, ಫ್ಯಾಸಿಸ್ಟ್ ಮತ್ತು ರಾಷ್ಟ್ರವಿರೋಧಿ ಶಕ್ತಿಗಳನ್ನು ಸೋಲಿಸಲು ಜನಶಕ್ತಿ ಬೆಳೆಸಬೇಕೆಂದೂ ಕರೆಕೊಟ್ಟಿದೆ. ಪಂಜಾಬಿನ ಇತ್ತೀಚೆಗಿನ ಘಟನೆಗಳ ಕುರಿತು ಪ್ರಸ್ತಾಪಿಸುತ್ತಾ ಧರ್ಮವನ್ನು ರಾಷ್ಟ್ರವಿರೋಧಿ ಚಟುವಟಿಕೆಗಳಿಗೆ ಉಪಯೋಗಿಸಲು ತನ್ನ ಸರಕಾರ ಬಿಡುವುದಿಲ್ಲೆಂದೂ, ಮುಖ್ಯಮಂತ್ರಿಬರ್ನಾಲಾ, ಅವರ ಸರ್ಕಾರ ಹಾಗೆಯೇ ಪಂಜಾಬಿನ ಜನತೆ ಜಾತ್ಯಾತೀತ ಜನತಂತ್ರದ ಮೌಲ್ಯಗಳನ್ನು ಎತ್ತಿ ಹಿಡಿಯುವಲ್ಲಿ ಎಲ್ಲರಿಗೂ ಮೇಲ್ಪಂಕ್ತಿ ಹಾಕಿಕೊಡುವಷ್ಟು ಧೈರ್ಯ ತೋರಿದೆಂದು ಹೊಗಳಿಕೆಯ ಮಾತುಗಳನ್ನಾಡಿದರು. ಇದು ಸ್ವಾಗತಾರ್ಹವಾದ ಮಾತು ಆದರೆ ಕೆಲವು ದಿವಸಗಳ ಹಿಂದೆ ಪ್ರಧಾನಿ ರಾಜೀವ್‌ಗಾಂಧಿಯವರು ಪಂಜಾಬಿನ ಸಮಸ್ಯೆಗಳಿಗೆಲ್ಲ ಬರ್ನಾಲಾ ಸರ್ಕಾರವೇ ಕಾರಣ ಎಂದು ಹೇಳಿರುವುದನ್ನು ಮರೆತಂತೆ ಕಾಣುತ್ತಿದೆ.

ಮತೀಯ, ಭಯೋತ್ಪಾದಕ ಶಕ್ತಿಗಳೊಡನೆ ಅಧಿಕಾರ ಲಾಲಸೆಗಾಗಿ ಸೇರಿಕೊಂಡ ಕಾಂಗ್ರೆ ಪಕ್ಷವೇ ದೇಶದಲ್ಲಿ ಭಯೋತ್ಪಾದಕ,ಛಿದ್ರಕಾರಿ, ಪಂಥೀಯ ಶಕ್ತಿ ಬೆಳೆಯಲು, ಬಹಿರಂಗವಾಗಿಯೇ ಅವುಗಳ ಚಟುವಟಿಕೆ ನಡೆಯಲು ಮುಖ್ಯ ಕಾರಣವೆಂಬುದನ್ನು ರಾಷ್ಟ್ರಾಧ್ಯಕ್ಷರು ಮರೆತಿದ್ದಾರೆಯೇ?

ಆರ್ಥಿಕ ಪ್ರಗತಿ ಕುರಿತು ವಿಶ್ಲೇಷಿಸುತ್ತಾ "ರಾಷ್ಟ್ರೀಯ ಆರ್ಥಿಕ ಪರಿಸ್ಥಿತಿ ಸುಧಾರಿಸಿದೆ, ಕೈಗಾರಿಕಾ ಬಾಂಧವ್ಯ ಆಶಾದಾಯಕವಾಗಿದೆಂದು" ರಾಷ್ಟ್ರಪತಿಯವರು ಹೇಳಿದ್ದಾರೆ. ... ವ ಪರಿಸ್ಥಿತಿಗೆ ಅದು ಸರಿಹೊಂ... .

ದೇಶದ ಆರ್ಥಿಕ ಭದ್ರತೆಗೆ ಮೂಲಸ್ತಂಭವಾಗಿರುವ ಸಾರ್ವಜನಿಕ ಕ್ಷೇತ್ರವನ್ನು ಸಂಪೂರ್ಣ ಕಡೆಗಣಿಸಿ ವಿದೇಶೀ ಬಹುರಾಷ್ಟ್ರೀಯ ಸಂಸ್ಥೆಗಳಿಗೆ ದೇಶದ ಆರ್ಥಿಕ–ಕೈಗಾರಿಕಾ ಕ್ಷೇತ್ರವನ್ನು ಒಪ್ಪಿಸುವ ರಾಜೀವ ಗಾಂಧಿ ಸರಕಾರದ ನೀತಿಯ ವಿರುದ್ಧ ಸಾರ್ವಜನಿಕ ಕ್ಷೇತ್ರದ ಕಾರ್ಮಿಕರು ಜನವರಿ 21ರಂದು ದೇಶಾದ್ಯಂತ ಮುಷ್ಕರ ಹೂಡಿದ್ದರು. ಕಾರ್ಖಾನೆಗಳ ಮುಚ್ಚುವಿಕೆ, ಬೀಗಮುದ್ರೆ ಅಸ್ವಸ್ಥತೆಗಳು ದಿನನಿತ್ಯ ಹೆಚ್ಚಾಗುತ್ತಿದೆ.ಸರಕಾರದ ದಸ್ತಾವೇಜಿನ ಪ್ರಕಾರವೇ ದೊಡ್ಡ ಕೈಗಾರಿಕೆಗಳ ಮುಚ್ಚುವಿಕೆ 400ರಿಂದ 500ಕ್ಕೆ ಏರಿದೆ(1984ರಲ್ಲಿ),ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳ ಸಂಖ್ಯೆ 28,000 ದಿಂದ 1ಲಕ್ಷ 20ಸಾವಿರಕ್ಕೆ ಏರಿದೆ, ಈ ರೀತಿ ಕಾರ್ಖಾನೆಗಳ ಮುಚ್ಚುವಿಕೆಯಿಂದಾಗಿ 1984 ರಲ್ಲಿ 71,000 ಕಾರ್ಮಿಕರು ಬೀದಿಪಾಲಾಗಿದ್ದರು ಈಗ ಅದು ಎರಡು ಲಕ್ಷದಷ್ಟಾಗಿದೆ

ಕಾಂಗ್ರೆಸ್ ಸರಕಾರ ಅನುಸರಿಸುತ್ತಿರುವ ಬಂಡವಾಳಶಾಹೀ ಪದ್ಧತಿಯ ಯೋಜನೆಯಿಂದಾಗಿ ನಿರುದ್ಯೋಗಿಗಳ ಸಂಖ್ಯೆ ಪ್ರಥಮ ಯೋಜನೆಯಲ್ಲಿ (1951ರಲ್ಲಿ) 3ಲಕ್ಷ ಇತ್ತು. ನಾಲ್ಕನೇ ಯೋಜನೆಯಲ್ಲಿ 1.71 ಕೋಟಿಯಾ

[8ನೇ ಪುಟ ನೋಡಿ]

ಕರ್ನಾಟಕಕ್ಕೆ ಮತ್ತೆ ಕೈಕೊಟ್ಟ
ರೈಲ್ವೆ ಬಜೆಟ್

69 ಕೋಟಿ ರೂಪಾಯಿ ಉಳಿತಾಯದ ಹೊಸ ವರ್ಷದ ರೈಲ್ವೆ ಬಜೆಟ್‌ನ್ನು ರೈಲ್ವೆ ಮಂತ್ರಿ ಸಿಂಧ್ಯಾ ಅವರು ಲೋಕ ಸಭೆಯಲ್ಲಿ ಮಂಡಿಸಿದ್ದಾರೆ. ಪ್ರಯಾಣಿಕರ ಪ್ರಯಾಣದ ದರ ಹೆಚ್ಚಿಲ್ಲ ಎಂದು ಸಮಾಧಾನ ಪಡುವ ಕಾರಣವೇನಿಲ್ಲ, ಹೋದ ವರ್ಷ ಬಜೆಟ್‌ನಲ್ಲಿ ಪ್ರಯಾಣದ ದರ ಹೆಚ್ಚಿಸಿ, ಈ ಬಜೆಟ್‌ಗಿಂತ ಮಂಚೆ ಹೋದ ವರ್ಷ ನವಂಬರ ತಿಂಗಳಲ್ಲಿ ವಸ್ತುಗಳ ಸಾಗಾಣಿಕೆ ದರ ಏರಿಸಿ 3.0 ರೂ ರಷ್ಟು ಹೊಸ ಹೊರೆ ಹೇರಿದ ರೈಲ್ವೆ ಮಂತ್ರಿ ಈಗ ಮೂರು ರಾಜ್ಯಗಳಲ್ಲಿ ವಿಧಾನ ಸಭೆ ಚುನಾವಣೆ ನಡೆಯುತ್ತಿರುವುದನ್ನು ದೃಷ್ಟಿಯಲ್ಲಿಟ್ಟುಕೊಂಡೇ ಪ್ರಯಾಣದ ದರ ಹೆಚ್ಚಿಸಿರಲಿಕ್ಕಿಲ್ಲ. ಬಜೆಟ್ಟಿನ ಪೂರ್ವದಲ್ಲಿಯೇ ಸುಗ್ರೀವಾಜ್ಞೆ ಮೂಲಕ ಕರ ಹೇರುವ ಇಂದಿರಾ ಗಾಂಧಿಯವರ ನೀತಿ ಈಗಲೂ ಮುಂದುವರಿದಿದೆ. 1985–86ರಲ್ಲಿ ಮುಂಗಡಪತ್ರ ಲೋಕ ಸಭೆಯಲ್ಲಿ ಮಂಡಿಸುವ ಮುಂಚೆಯೇ ಉಕ್ಕು, ಗೊಬ್ಬರ, ರೈಲ್ವೆ ಸಾಗಾಣಿಕೆ ದರಗಳ ಹೆಚ್ಚಳದ ಭಾರವನ್ನು ಜನರ ಮೇಲೆ ಹೇರಲಾಗುತ್ತೆಂಬುದನ್ನು ಮರೆಯುವಂತಿಲ್ಲ- ಈಗ ಮತ್ತೆ ವರ್ಷಕೊನೆಗೊಳ್ಳುವುದರೊಳಗಾಗಿ ರೈಲ್ವೆ ಪ್ರಯಾಣದರ ಹೆಚ್ಚಲಿಕ್ಕಿಲ್ಲೆಂದು ಹೇಳಿದರೆ ತಪ್ಪಾದೀತು.

ಹಿಂದಿನ ವರ್ಷಗಳಂತೆಯೇ ಈ ವರ್ಷ ಕೂಡ ರೈಲ್ವೆ ಮಂತ್ರಿ ಕರ್ನಾಟಕವನ್ನು ಸಂಪೂರ್ಣ ಕಡೆಗಣಿಸಿದ್ದಾರೆ. ಮೈಸೂರು–ಬೆಂಗಳೂರು, ಬೆಂಗಳೂರು–ಬಂಗಾರಪೇಟೆ, ಬೆಂಗಳೂರು–ಮಿರಜ, ಹುಬ್ಬಳ್ಳಿ ಸೋಲಾಪುರ, ಮೊದಲಾದ ಮುಖ್ಯ ರೈಲ್ವೆಗಳ ಬ್ರಾಡ್‌ಗೇಜ್ ಪರಿವರ್ತನೆಯನ್ನೂ ಕೈ ಬಿಡಲಾಗಿದೆ. ಇವುಗಳನ್ನು ಕುರಿತು ಸರ್ವೆ ಮುಗಿದಿದೆಂದು ಈ ಮುಂಚೆಯೇ ಹೇಳಲಾಗಿತ್ತು. ಮಂಗಳೂರು ರೋಹದ ವರೆಗಿನ ಕರಾವಳಿ ರೈಲ್ವೆಯ ಸಮೀಕ್ಷೆ 1988 ಮಾರ್ಚಿ ತಿಂಗಳೊಳಗೆ ಮುಕ್ತಾಯಗೊಳಿಸಲಾಗುವುದೆಂಬ ಆಶ್ವಾಸನೆ ಹೊರಬಿದ್ದಿದೆ.

(8ನೇ ಪುಟ ನೋಡಿ)

ಕಾರ್ಮಿಕರಿಗೆ ಅನ್ಯಾಯ - ಸಿ. ಐ. ಟಿ. ಯು. ರಾಜ್ಯ ಮಂಡಳಿ

ಫೆಬ್ರುವರಿ 21-22 ರಂದು ಹರಿಹರದಲ್ಲಿ ಸೇರಿದ್ದ ಸಿ. ಐ. ಟಿ. ಯು. ಕರ್ನಾಟಕ ರಾಜ್ಯ ಮಂಡಳಿ ಸಭೆಯಲ್ಲಿ ಪಾಸಾದ ಕೆಲವು ಮುಖ್ಯ ನಿರ್ಣಯಗಳು

ಹಂಚಿನ ಕೆಲಸಗಾರರಿಗೆ ಅನ್ಯಾಯ

ದ.ಕ. ಜಿಲ್ಲೆಯಲ್ಲಿ ದುಡಿಯುತ್ತಿರುವ ಸುಮಾರ 7 ಸಾವಿರಕ್ಕೆ ಮಿಕ್ಕಿರುವ ಹಂಚಿನ ಕೆಲಸಗಾರರಿಗೆ ಕನಿಷ್ಟ ವೇತನ ಮತ್ತು ಏರಿಳಿತ ತುಟ್ಟಿ ಭತ್ತೆ ನಿರ್ಣಯಿಸುತ್ತೇನೆಂದು ರಾಜ್ಯಸರ್ಕಾರ ಕಳೆದ ಮೂರುವರ್ಷಗಳಿಂದ ಆಶ್ವಾಸನೆ ನೀಡುತ್ತಿದ್ದರೂ ಕೂಡ ಅದನ್ನು ಜಾರಿಯಲ್ಲಿ ತರಲು ನಿರಾಕರಿಸುತ್ತಿರುವ ರಾಜ್ಯ ಸರ್ಕಾರದ ನೀತಿಯನ್ನು ಖಂಡಿಸಿ, ಆ ಬೇಡಿಕೆಗಳಿಗಾಗಿ ಹಂಚಿನ ಕಾರ್ಮಿಕರು ನಡೆಸುತ್ತಿರುವ ಹೋರಾಟಕ್ಕೆ ರಾಜ್ಯ ಮಂಡಳಿ ಬೆಂಬಲ ನೀಡಿದೆ. ಹಾಗೆಯೇ ಕಡೂರಿನ ಸ್ಟಾಂಡರ್ಡ್ ಟೈಲ್ ಕಾರ್ಖಾನೆಯು ಕಾರ್ಮಿಕನನ್ನು ಅನ್ಯಾಯವಾಗಿ ನೌಕರಿಯಿಂದ ತೆಗೆದು ಹಾಕುವುದರ ವಿರುದ್ಧ ನಡೆಸುತ್ತಿರುವ ಹೋರಾಟಕ್ಕೂ ದ.ಕ. ಜಿಲ್ಲೆಯ ಕುಂದಾಪುರದ ಹಂಚಿನ ಕಾರ್ಮಿಕರು 28-1-87 ರಿಂದ ನಡೆಸುತ್ತಿರುವ ಮುಷ್ಕರಕ್ಕೂ ಬೆಂಬಲ ನೀಡಿ ಕಾರ್ಮಿಕರ ಸಮಸ್ಯೆಗಳನ್ನು ಕೂಡಲೇ ಬಗೆಹರಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಿದೆ.

ಮೈಸೂರು ಕಿರ್ಲೋಸ್ಕರ ಕಾರ್ಮಿಕರ ಸಮಸ್ಯೆ

ಹರಿಹರದಲ್ಲಿರುವ ಮೈಸೂರು ಕಿರ್ಲೋಸ್ಕರ ಕಂಪೆನಿಯ ಆಡಳಿತ ವರ್ಗ ಇತ್ತೀಚೆಗೆ ಯೂನಿಯನಿನ 3 ಸಕ್ರಿಯ ಸದಸ್ಯರನ್ನು ಕೆಲಸದಿಂದ ತೆಗೆದು ಹಾಕಿದ್ದಲ್ಲದೆ ಗೈರು ಹಾಜರಿಯ ನೆವದಿಂದ ಹಲವಾರು ಕೆಲಸಗಾರರನ್ನು ವಜಾ ಮಾಡಿದೆ. ಶಿಸ್ತಿನ ಹೆಸರಿನಲ್ಲಿ ಕೆಲಸಗಾರರ ಹಕ್ಕು ಕಿತ್ತುಕೊಂಡು ಕಿರುಕುಳ ಕೊಡುತ್ತಿದೆ.

ಈ ಕಂಪೆನಿ ಭಾರತದಲ್ಲೇ ಪ್ರಥಮ ಮೆಶಿನ್ ಟೂಲ್ಸ್ ಕಾರ್ಖಾನೆಯಾಗಿದ್ದು ಆಡಳಿತ ಮಂಡಳಿಯ ವಿಫಲತೆಯನ್ನು ಕೆಲಸಗಾರರ ಮೇಲೆ ಹೊರಿಸುವ ನೀತಿಯನ್ನು ಸಭೆ ಬಲವಾಗಿ ಖಂಡಿಸಿ, ಕಾರ್ಮಿಕರ ಮೇಲಾಗುತ್ತಿರುವ ದಬ್ಬಾಳಿಕೆಯನ್ನು ಕೊಡಲೇ ನಿಲ್ಲಿಸಬೇಕೆಂದು ಸಭೆ ಕೇಳಿಕೊಂಡಿದೆ.

ಬೀಡಿ ಕಾರ್ಮಿಕರಿಗೆ ಮೋಸ

ಕನಿಷ್ಟ ಕೂಲಿಯನ್ನು ಕಾಲಕಾಲಕ್ಕೆ ಸರಿಯಾಗಿ ಪ್ರಕಟಿಸದೆ ಕಾರ್ಮಿಕರಿಗೆ ಸರಕಾರ ಅನ್ಯಾಯ ಮಾಡುತ್ತಿದೆ. ತಮ್ಮ ಹೋರಾಟದ ಫಲವಾಗಿ ಬೀಡಿ ಕಾರ್ಮಿಕರು ಪ್ರತಿ ಸಾವಿರ ಬೀಡಿಗೆ ರೂ. 12.25 ಪಡೆಯುತ್ತಿರುವಾಗ ರಾಜ್ಯ ಸರಕಾರ ಅವರಿಗೆ ತುಟ್ಟಿಭತ್ಯೆ ಸೇರಿ ರೂ. 11.50 ನಿಗದಿ ಮಾಡಿದೆ. ರಾಜ್ಯದಲ್ಲಿ ಬೇರೆ ಕೈಗಾರಿಕೆಗಳಲ್ಲಿ ದುಡಿಯುತ್ತಿರುವ ಕಾರ್ಮಿಕರ ತುಟ್ಟಿಭತ್ಯೆಯನ್ನು ಸೂಚ್ಯಾಂಕ 470 ಕ್ಕೆ ನಿರ್ಧರಿಸಿ, ಬೀಡಿ ಕೆಲಸಗಾರರಿಗೆ 650 ಪಾಯಿಂಟ್ ನಿಗದಿ ಮಾಡಿರುವುದು ಅನ್ಯಾಯ. ಕನಿಷ್ಟ ಕೂಲಿ ಸಲಹಾ ಸಮಿತಿಯ ಶಿಫಾರಸುಗಳನ್ನು ಕೂಡಲೇ ಜ್ಯಾರಿಯಲ್ಲಿ ತರಬೇಕೆಂದು ಮಂಡಳಿ ಸಭೆ ಸರಕಾರವನ್ನು ಒತ್ತಾಯ ಪಡಿಸಿದೆ

ಜವಳಿ ಕೈಗಾರಿಕೆಯಲ್ಲಿ ಮುಗ್ಗಟ್ಟು

ಕೇಂದ್ರ ಸರಕಾರದ ಹೊಸ ಜವಳಿ ನೀತಿಯಿಂದಾಗಿ ಕಾರ್ಮಿಕರ ಶೋಷಣೆ ಹೆಚ್ಚಾಗಿದೆ. ಲಾಭದಾಯಕವಾಗಿಲ್ಲೆಂಬ ಕಾರಣದಿಂದ ಗಿರಣಿಗಳನ್ನು ಮುಚ್ಚಿ ಕೆಲಸಗಾರರನ್ನು ಬೀದಿಪಾಲು ಮಾಡಲಾಗುತ್ತಿದೆ. ದಾವಣಗೆರೆಯಲ್ಲಿ 4, ಮೈಸೂರಿನಲ್ಲಿ 1 ಮಿಲ್ ಮುಚ್ಚಲಾಗಿದೆ. ಬೆಂಗಳೂರಿನಲ್ಲಿ ಮೈಸೂರು ಮಿಲ್ಲನ್ನು ಮುಚ್ಚುವ ಸಂಭವವಿದೆ ಎನ್. ಟಿ. ಸಿ. ಯವರು ನಡೆಸುತ್ತಿರುವ ಮಿನರ್ವಾ ಮಿಲ್ಲನ್ನು ನವೀಕರಣಗೊಳಿಸಿ ಕೆಲಸಗಾರರನ್ನು ಹೊರಗೆ ಹಾಕಲಾಗುತ್ತಿದೆ ಭೋರುಕಾ ಟೆಕ್ಸ್‌ಟೈಲ್ಸ್‌ಗೆ ಬೀಗಮುದ್ರೆ ಹಾಕಲಾಗಿದೆ.

ಕೇಂದ್ರ ಸರ್ಕಾರದ ಜವಳಿ ನೀತಿಯ ವಿರುದ್ಧ ಕೆಲಸಗಾರರು ಹೋರಾಟ ನಡೆಸಿದ್ದು ಅದಕ್ಕೆ ರಾಜ್ಯಮಂಡಳಿ ಬೆಂಬಲ ನೀಡಿ, ಮುಚ್ಚಲ್ಪಟ್ಟ ಗಿರಣಿಗಳನ್ನು ಕೂಡಲೇ ತೆರೆಯಬೇಕೆಂದು ಸರ್ಕಾರವನ್ನು ಒತ್ತಾಯಿಸಿದೆ.

ಇತರ ನಿರ್ಣಯಗಳು

ಬೆಂಗಳೂರಿನ ಐ. ಟಿ. ಸಿ. ಕಂಪೆನಿ ಕಾರ್ಮಿಕರಿಗೆ ಬೋನಸ್, ಇನ್‌ಸೆಂಟಿವ್‌ಗಳನ್ನು ನಿರಾಕರಿಸುತ್ತಿದ್ದು, ಕಾಯಿದೆ ಪ್ರಕಾರ ಅವುಗಳನ್ನು ನೀಡಬೇಕೆಂದು ಕೇಳುವ ರಾಜ್ಯಾದ್ಯಂತ ಮುಷ್ಕರ ಹೂಡಿದ್ದ ಪೌರ ಕಾರ್ಮಿಕರ ಬೇಡಿಕೆಗಳನ್ನು ಕೂಡಲೇ ಮಂಜೂರು ಮಾಡಬೇಕೆಂದು ಒತ್ತಾಯಿಸುವ ಧಾರವಾಡದ ಟೈವಾಕ ಕಂಪೆನಿಯ ಕಾರ್ಮಿಕರು ಬೇಡಿಕೆಗಳಿಗಾಗಿ 16-2-87 ರಿಂದ ನಡೆಸುತ್ತಿರುವ ಅನಿರ್ದಿಷ್ಟ ಅವಧಿಯ ಮುಷ್ಕರಕ್ಕೆ ಬೆಂಬಲ ನೀಡುವ, ಧರ್ಮಸ್ಥಳದಲ್ಲಿ ಪದ್ಮಲತಾ ಎಂಬ ವಿದ್ಯಾರ್ಥಿನಿಯ ಆಕಸ್ಮಿಕ ಮರಣದ ಕುರಿತು ಪೋಲೀಸರು ಸರಿಯಾಗಿ ಚೌಕಾಶಿ ಮಾಡದಿರುವುದನ್ನು ಖಂಡಿಸುವ ನಿರ್ಣಯಗಳು ಮಂಡಳಿ ಸಭೆಯಲ್ಲಿ ಪಾಸಾದವು.

ಒಂದೂವರೆ ವರ್ಷ ಮೀರಿದ ಹೋಟೆಲ್ ಕಾರ್ಮಿಕರ ಹೋರಾಟ

ಬೆಂಗಳೂರಿನ ಈಸ್ಟ್-ವೆಸ್ಟ್ ಹೋಟೇಲಿನ ಕಾರ್ಮಿಕರು ಒಂದು ವರ್ಷಕ್ಕೂ ಹೆಚ್ಚು ಕಾಲ ನಡೆಸಿರುವ ಹೋರಾಟದ ಕಥೆ

ಬೆಂಗಳೂರು ನಗರದಲ್ಲಿ ಸುಮಾರು ಒಂದು ಲಕ್ಷ ಹೋಟೆಲ್ ಕಾರ್ಮಿಕರಿರಬಹುದೆಂದು ಅಂದಾಜು ಮಾಡಲಾಗಿದೆ ಇವರಲ್ಲಿ ಶೇ. 20 ರಷ್ಟು ಮಂದಿ ಕೂಡಾ ಸಂಘಟಿತರಾಗಿಲ್ಲ. ಸಂಘಟಿತರಾಗಲು ಇವರಿಗಿರುವ ಸಮಸ್ಯೆಗಳು ಹಲವಾರು. ಜೀತದಾಳುಗಳಂತೆ ದುಡಿಯುತ್ತಿರುವ ಈ ಹೊಟೆಲ್ ಕಾರ್ಮಿಕರಿಗೆ ಉದ್ಯೋಗದ ಭದ್ರತೆಯಿಲ್ಲ. ಕನಿಷ್ಠ ಸೌಲಭ್ಯಗಳು ಕೂಡಾ ಇಲ್ಲ. ಸರ್ಕಾರವಾಗಲಿ, ಕಾರ್ಮಿಕ ಇಲಾಖೆಯಾಗಲಿ ಇತ್ತ ಗಮನಹರಿಸಿಲ್ಲ.

ಸಿಐಟಿಯು ಸದಸ್ಯರಾದರು

ಹೋಟೆಲ್ ಕಾರ್ಮಿಕರ ದುಸ್ಥಿತಿಯನ್ನು ಅರಿತ ಸಿಐಟಿಯು ಹೋಟೆಲ್ ಕಾರ್ಮಿಕರ ಹಕ್ಕುಗಳನ್ನು ರಕ್ಷಿಸಿ ಅವರ ಕಲ್ಯಾಣಕ್ಕಾಗಿ ಶ್ರಮಿಸುವ ಉದ್ದೇಶ ಹೊತ್ತು ಬೆಂಗಳೂರು ಜಿಲ್ಲಾ ಹೋಟೆಲ್ ಕಾರ್ಮಿಕರ ಸಂಘವನ್ನು ಸ್ಥಾಪಿಸಿತು. ಹಲವಾರು ಸಣ್ಣ ಮಧ್ಯಮ ಹೋಟೆಲ್‌ನ ಕೆಲಸಗಾರರು ಇದರ ಸದಸ್ಯರಾದರು. ಸಂಘವು ಕೆಲಸಗಾರರ ಸೌಲಭ್ಯಗಳಿಗಾಗಿ, ಅವರ ಹಕ್ಕು ಭಾದ್ಯತೆಗಳಿಗಾಗಿ ಹೋರಾಟಗಳನ್ನು ನಡೆಸತೊಡಗಿತ್ತು. ಇದರಿಂದ ಉತ್ತೇಜಿತರಾಗಿ ಇತರ ಹೋಟೆಲ್‌ಗಳ ಕಾರ್ಮಿಕರು ಸಂಘಟಿಸಿದೆಗೆ ಬರತೊಡಗಿದರು. ಈಸ್ಟ್ ವೆಸ್ಟ್ ಹೊಟೆಲ್ಲಿನ ಕಾರ್ಮಿಕರೂ ಕೂಡ ಸಂಘದ ಸದಸ್ಯರಾಗಲು ಮುಂದೆ ಬಂದದ್ದು ಕೂಡ ಇದೇ ಕಾರಣದಿಂದಲೇ. ಆದರೆ ಈ ಹೊಟೆಲ್‌ನ ಮಾಲಿಕನಿಗೆ ಸಿ.ಐ.ಟಿ.ಯು. ಸಂಘಕ್ಕೆ ತನ್ನ ಕಾರ್ಮಿಕರು ಸದಸ್ಯರಾಗಿದ್ದದ್ದು ಹಿಡಿಸಲಿಲ್ಲ. ಐ.ಎನ್.ಟಿ.ಯು.ಸಿ, ಹೆಚ್.ಎಂ. ಎಸ್. ಗಳು ಸಂಘವನ್ನು ಮಾಡಿದಾಗ ವಿರೋಧಿಸದಿದ್ದ ಈ ಮಾಲೀಕ ಸಿ.ಐ.ಟಿ.ಯು. ಸಂಘವನ್ನು ವಿರೋಧಿಸಿದ್ದೇಕೆ? ಬಹುಶಃ ಆ ಸಂಘಗಳ ಮುಖಂಡರುಗಳಿಗೂ ಮಾಲೀಕರಿಗೂ ಏನಾದರೂ 'ಸಂಬಂಧ' ಇದ್ದಿರಬಹುದೇ?

ಅಂತೂ ಮಾಲೀಕರು ತಮ್ಮ ಹೊಟೆಲಿನಲ್ಲಿ ಸಿ.ಐ.ಟಿ ಯು. ಸಂಘ ಸ್ಥಾಪನೆಯಾದ ಕೂಡಲೇ 1985ರ ಜುಲೈ ತಿಂಗಳಿನಲ್ಲಿ ಸಂಘದ ಪ್ರಮುಖ ಮುಖಂಡರನ್ನು ಕೆಲಸದಿಂದ ವಜಾ ಮಾಡಿದರು. ಅಲ್ಲದೆ 5 ಮಂದಿ ಕಾರ್ಮಿಕರನ್ನು ಸಸ್ಪೆಂಡ್ ಮಾಡಿದರು. ಇದನ್ನು ಪ್ರತಿಭಟಿಸಿ ಅಲ್ಲಿನ ಎಲ್ಲಾ 225 ಕಾರ್ಮಿಕರು 'ಟೂಲ್ ಡೌನ್' ಮುಷ್ಕರವನ್ನು ನಡೆಸಿದರು. ಅದೇ ದಿನ ಸಂಜೆ 5 ಗಂಟೆಗೆ ಹೋಟೆಲನ್ನು ಲಾಕೌಟ್ ಮಾಡಿರುವುದಾಗಿ ಆಡಳಿತವರ್ಗ ಘೋಷಿಸಿತು. ಆದರೆ ಇದನ್ನು ಒಪ್ಪದ ಕಾರ್ಮಿಕರು, ಹೋಟೆಲ್ ಒಳಗಿನ 'ಲಾಬಿಹಾಲ್'ನಲ್ಲಿ ಧರಣಿ ಕುಳಿತರು. 15 ದಿನಗಳ ಕಾಲ ಹಗಲು-ರಾತ್ರಿ ಕಾರ್ಮಿಕರು ಒಂದೇ ಸಮನೆ ಧರಣಿ ಮುಷ್ಕರ ನಡೆಸಿದರು. ನಂತರ ಆಡಳಿತ ವರ್ಗ ನ್ಯಾಯಾಲಯದಿಂದ ಅನುಮತಿ ತರಿಸಿಕೊಂಡು ಕಾರ್ಮಿಕರು ಹೋಟೆಲ್ ಆವರಣದಿಂದ ಹೊರಗೆ ಹೋಗುವಂತೆ ಮಾಡಿದರು. ಹೋಟೆಲ್‌ನಿಂದ ಹೊರಬಂದ ಕಾರ್ಮಿಕರು ಹೋಟೆಲ್ ಮುಂಭಾಗದ ಫುಟಪಾತ್ ಮೇಲೆ ಟೆಂಟ್ ಹಾಕಿ ಕೂತರು. ತಮಗಾದ ಅನ್ಯಾಯವನ್ನು ಪ್ರತಿಭಟಿಸಿ ಸತ್ಯಾಗ್ರಹ ಪ್ರಾರಂಭಿಸಿದರು. ಆಡಳಿತ ವರ್ಗಕ್ಕೆ ಇದೂ ಕೂಡಾ ಸಹಿಸಲಾಗಲಿಲ್ಲ. ಪಾದಚಾರಿಗಳಿಗೆ ಅಡಚಣೆಯಾಗುತ್ತದೆಂಬ ನೆಪವೊಡ್ಡಿ ಸಿವಿಲ್ ನ್ಯಾಯಾಲಯದಲ್ಲಿ ತಡೆಯಾಜ್ಞೆ ತರಲು ಪ್ರಯತ್ನಿಸಿತು ಸಿವಿಲ್ ನ್ಯಾಯಾಲಯದ ನ್ಯಾಯಾಧೀಶರೊಬ್ಬರು ಕಾರ್ಮಿಕರು ಧರಣಿ ಸತ್ಯಾಗ್ರಹ ನಡೆಸುತ್ತಿದ್ದ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ನಂತರ ಅವರು ಕಾರ್ಮಿಕರು ಧರಣಿ ನಡೆಸುತ್ತಿರುವುದು ನ್ಯಾಯಬದ್ಧವಾಗಿದೆಯೆಂದೂ, ಈ ಸತ್ಯಾಗ್ರಹದಿಂದಾಗಿ ಫುಟ್ ಪಾತಿನಲ್ಲಿ ಜನರ ಓಡಾಟಕ್ಕೆ ಯಾವುದೇ ರೀತಿಯ ತೊಂದರೆಯಾಗುತ್ತಿಲ್ಲ ಎಂದು ಅಭಿಪ್ರಾಯ ಪಟ್ಟು, ಆಡಳಿತವರ್ಗದವರ ದೂರನ್ನು ತಿರಸ್ಕರಿಸಿದರು.

ಈ ಮಧ್ಯೆ ಎಷ್ಟೋ ದಿನಗಳು ಉರುಳಿ ಹೋಗಿದ್ದು ಕಾರ್ಮಿಕರು ಮತ್ತವರ ಕುಟುಂಬದವರು ಅನೇಕ ಕಷ್ಟ ನಷ್ಟಗಳನ್ನನುಭವಿಸಿದರು. ಇದರಿಂದಾಗಿ ಕಾರ್ಮಿಕರು ಮೈ ಚಳಿ ಬಿಟ್ಟು, ದಾರಿಹೋಕರಿಗೆ ತಮ್ಮ ಹೋರಾಟದ ಬಗ್ಗೆ ತಿಳಿಸಿ ಹಣ ಸಂಗ್ರಹಿಸಲು ತೊಡಗಿದರು. ಒಂದೆರಡು ತಿಂಗಳಲ್ಲೇ ಹೀಗೆ ಸಂಗ್ರಹವಾದ ಹಣ 10,000 ರೂಪಾಯಿಗಳಷ್ಟಾಯಿತು. ಈ ಹಣದಿಂದ ಕಾರ್ಮಿಕರ ದಿನನಿತ್ಯದ ಊಟದ ಸಮಸ್ಯೆಯಂತೂ ಕೊಂಚಮಟ್ಟಿಗೆ ಬಗೆಹರಿಯಿತು. ಆದರೆ ಎಷ್ಟು ದಿನಗಳ ಕಾಲ ಹೀಗೇ ಮುಂದುವರಿಯಲು ಸಾಧ್ಯ?

ಸೌಹಾರ್ದ ಬೆಂಬಲ

ಸೆಪ್ಟಂಬರ್ 25, 1985 ರಂದು ಒಂದು ಸೌಹಾರ್ದ ಸಭೆಯನ್ನು ಕರೆಯಲಾಯಿತು ಅದರಲ್ಲಿ ಹೋರಾಟದ ಬಗ್ಗೆ ಕೂಲಂಕುಷವಾಗಿ ಚರ್ಚೆ ನಡೆಸಿ ಒಂದು ಸಮಿತಿಯನ್ನು ರಚಿಸಲಾಯಿತು. ಸಿ.ಐ.ಟಿ ಯು. ಮುಖಂಡರುಗಳಾದ ಕಾ. ಟಿ.ಎಸ್. ಅನಂತರಾಂ ಕಾಂ. ಕೆ.ವಿ ಶ್ರೀನಿವಾಸ ಮತ್ತು ಕಾ. ಕೆ.ಎಸ್. ಸುಬ್ರಹ್ಮಣ್ಯಂ ಈ ಸಮಿತಿಯ ಸಂಚಾಲಕರಾಗಿ ಆಯ್ಕೆಯಾದರು.

ಈ ಕಾರ್ಮಿಕ ಮುಖಂಡರುಗಳು ಹೋಟೆಲ್‌ಗಳ ಲಾಕೌಟ್‌ಅನ್ನು ತೆರವು ಮಾಡಬೇಕೆಂದು ಒತ್ತಾಯಿಸಿ ಧರಣಿ ಮುಷ್ಕರ ನಡೆಸಿದರು. ಒಂದು ದೊಡ್ಡ ಬಹಿರಂಗ ಸಭೆಯೂ ನಡೆಯಿತು.

ಇದೆಲ್ಲಾ ನಡೆದ ನಂತರವೂ ಈಸ್ಟ್ ವೆಸ್ಟ್ ಹೋಟೆಲ್‌ನ ಆಡಳಿತ ವರ್ಗ ಚಲಾವಣೆಯಲ್ಲಿಲ್ಲದ ಹಳೆಯ INTUC ಸಂಘದೊಡನೆ ಗುಪ್ತ ಒಪ್ಪಂದವನ್ನು ಮಾಡಿಕೊಂಡರು. ಬೀಗ ಮುದ್ರೆ ತೆರವು ಮಾಡುವುದು, ಸಂಬಳದಲ್ಲಿ 25 ರೂಪಾಯಿಗಳನ್ನು ಹೆಚ್ಚಿಸುವುದು, ಅಮಾನತ್ತುಗೊಳಿಸಿದ ಮತ್ತು ವಜಾಮಾಡಿದ ಕಾರ್ಮಿಕರ ವಿಷಯವನ್ನು ಮುಂದೆ ಪರಿಶೀಲಿಸುವುದು ಇವು ಒಪ್ಪಂದದ ಅಂಶಗಳಾಗಿದ್ದವು. ಕಾರ್ಮಿಕರು ಇದನ್ನು ಉಗ್ರವಾಗಿ ವಿರೋಧಿಸಿದರೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಕಾರ್ಮಿಕರ ಹೋರಾಟಕ್ಕೆ ಸೌಹಾರ್ದ ಬೆಂಬಲ ವ್ಯಕ್ತಪಡಿಸಿ ನಗರದ ಸಿ.ಐ.ಟಿ.ಯು ಸಂಘಗಳು ನಿಧಿ ಸಂಗ್ರಹ ನಡೆಸಿ ಕಾರ್ಮಿಕರಿಗೆ ನೀಡಿದವು. ಕೆಲವು ಸಂಘಗಳು ಕಾರ್ಮಿಕರ ಒಂದು ದಿನದ ಊಟದ ವ್ಯವಸ್ಥೆ ಮಾಡಿದರು ಮತ್ತೆ ಕೆಲವು ಕಾಫಿ-ತಿಂಡಿಗಳ ವ್ಯವಸ್ಥೆ ಮಾಡಿದವು. ಇದರಿಂದ ಹೋರಾಟ ನಿರತ ಕಾರ್ಮಿಕರ ನೈತಿಕ ಬಲ ಇನ್ನಷ್ಟು ಹೆಚ್ಚಿತು.

ಹೋಟೆಲಿನ ಆಡಳಿತ ವರ್ಗ ಹೊರಗಿನಿಂದ ಕೆಲಸಗಾರರನ್ನು ಕರೆಸಿಕೊಂಡು ಗೂಂಡಾಗಳ ನೆರವಿನಿಂದ ಕೆಲಸ ಪ್ರಾರಂಭಿಸಲು ಪ್ರಯತ್ನಿಸಿತು. ಕೆಲಸಕ್ಕೆಂದು ಬಂದಿದ್ದ ಹೊರಗಿನ ಕಾರ್ಮಿಕರು ಪರಿಸ್ಥಿತಿಯನ್ನು ಅರಿತುಕೊಂಡು ಸ್ವಯಂ ಪ್ರೇರಿತರಾಗಿ ಹೋಟೆಲ್‌ನಲ್ಲಿ ಕೆಲಸ ಮಾಡಲು ನಿರಾಕರಿಸಿ ತಮ್ಮ ವರ್ಗ ಸಹೋದರತೆಯನ್ನು ಪ್ರಕಟಪಡಿಸಿದರು.

ಬೀಗಮುದ್ರೆ ನಿಷೇಧ

ಕಾರ್ಮಿಕರನ್ನು ಸೋಲಿಸಲು ಆಡಳಿತ ವರ್ಗ ನಡೆಸಿದ ಎಲ್ಲಾ ಪ್ರಯತ್ನಗಳೂ ಸೋಲುತ್ತಾ ಬಂತು. ಹೋಟೆಲಿನ ಬೀಗ ಮುದ್ರೆಯ ಬಗ್ಗೆ ಪರಿಶೀಲಿಸಿ ನ್ಯಾಯ ದೊರಕಿಸಬೇಕೆಂದು ಸಂಘವು ಅಸಿಸ್ಟಂಟ್ ಲೇಬರ್ ಕಮಿಷನರ್ ಅವರನ್ನು ಕೇಳುತ್ತಾ ಬಂದಿದ್ದು, ಅವರು ಕಾರ್ಮಿಕರ ಮತ್ತು ಮಾಲೀಕರ ಪ್ರತಿನಿಧಿಗಳನ್ನು ಸಂಧಾನಕ್ಕೆ ಆಹ್ವಾನಿಸಿದರು. ಆದರೆ ಮಾಲೀಕರ ಪ್ರತಿನಿಧಿಗಳು ಸಂಧಾನಕ್ಕೆ ಬರಲಿಲ್ಲ ಅನೇಕ ಬಾರಿ ಸಂಧಾನಕ್ಕೆ ಪ್ರಯತ್ನಿಸಿ ವಿಫಲಗೊಂಡ ನಂತರ ಲೇಬರ್ ಕಮಿಷನರ್ ಅವರು ಬೀಗ ಮುದ್ರೆಯನ್ನು ನಿಷೇಧಿಸಬೇಕೆಂದು ಸರಕಾರಕ್ಕೆ ಶಿಫಾರಸು ಮಾಡಿದರು, ಸರ್ಕಾರ ಬೀಗಮುದ್ರೆಯನ್ನು ಕಾನೂನು ಬಾಹಿರವೆಂದು

[6ನೇ ಪುಟ ನೋಡಿ]

ಫಿಲಿಪೈನ್ಸ್‌ನಲ್ಲಿ ವರ್ಗ ಶಕ್ತಿಗಳ ಸಂಘರ್ಷ

- ಸೀತಾರಾಂ ಯೆಚೂರಿ

ಫಿಲಿಪೈನ್ಸ್ ಮಾರ್ಕೋಸ್ ಪತನದನಂತರ ಸದಾ ಸುದ್ದಿಯಲ್ಲಿದೆ. ಆದರೆ ನಮ್ಮ ದೇಶದ ಪತ್ರಿಕೆಗಳಲ್ಲಿ ಬರುವ ಸುದ್ದಿಗಳು ಗೊಂದಲಮಯವಾಗಿವೆ. ಅಕ್ವಿನೋ ಸರ್ಕಾರದ್ದು ಸಾತ್ವಿಕಶಕ್ತಿ, ಮಾರ್ಕೋಸ್‌ಪರ ಶಕ್ತಿಗಳಂತೆಯೇ ಕಮ್ಯುನಿಸ್ಟರು ಕೂಡಾ ಅದನ್ನು ಅಸ್ಥಿರಗೊಳಿಸಬಯಸುವ ಬಂಡುಕೋರ ಶಕ್ತಿಗಳು ಎಂಬಂತೆ ಅವು ಚಿತ್ರಿಸುತ್ತಿವೆ. ಅಲ್ಲಿ ಏನು ನಡೆಯುತ್ತಿದೆ ಎಂಬುದರ ವಿಚಾರ-ವಿಮರ್ಶೆ ಈ ಪತ್ರಿಕೆಗಳಲ್ಲಿ ಕಂಡುಬರುತ್ತಿಲ್ಲ.

ಫಿಲಿಪೈನ್ಸ್‌ನ ತ್ವರಿತಗತಿಯ ಬೆಳವಣಿಗೆಗಳಲ್ಲಿ ಸ್ಫುಟವಾದ ಪರಸ್ಪರ ಸಂಬಂಧಿಸಿದ ಮೂರು ಅಂಶಗಳನ್ನು ಕಾಣಬಹುದು. 1] ಶ್ರೀಮತಿ ಅಕ್ವಿನೋರವರ ಆಳ್ವಿಕೆಯ ದೃಢೀಕರಣ 2] ಮಾರ್ಕೋಸ್‌ಪರ ಶಕ್ತಿಗಳ ಅಸ್ಥಿರಗೊಳಿಸುವ ಪ್ರಯತ್ನ ಹಾಗೂ 3] ಅಕ್ವಿನೋ ಮತ್ತು ರಾಷ್ಟ್ರೀಯ ಪ್ರಜಾಪ್ರಭುತ್ವ ರಂಗದ ನಡುವೆ ಮಾತುಕತೆ.

ಮಾರ್ಕೋಸ್ ನಿರ್ಗಮನದ ಮುಂಚಿನ ಸುಮಾರು ಮೂರು ವರ್ಷಗಳ ಮಾರ್ಕೋಸ್-ವಿರೋಧಿ ಭಾವನೆಗಳಿಂದಾಗಿ ಹಾಗೂ ಅದರಿಂದಾಗಿ ಬೆಳೆಯುತ್ತಿದ್ದ ಸಾಮ್ರಾಜ್ಯಶಾಹೀ-ವಿರೋಧಿ ಪ್ರಗತಿಪರ ಶಕ್ತಿಗಳ ಮುನ್ನಡೆಯನ್ನು ತಡೆಯುವ ಅಗತ್ಯ ಫಿಲಿಪೈನ್ಸ್‌ನ ಆಳುವ ವರ್ಗಗಳಿಗಿದ್ದುದರ ಫಲವಾಗಿ ಅಧಿಕಾರಕ್ಕೆ ಬಂದರು ಅಕ್ವಿನೋ. ಅದರಿಂದಾಗಿ ಪ್ರಜಾಪ್ರಭುತ್ವದ ಮರುಸ್ಥಾಪನೆಗೆ ಆಕೆಯ ಸರ್ಕಾರ ಬಾಧ್ಯವಾಗಿದ್ದರೂ, ಜತೆಗೇ ಆಕೆಯ ಸರಕಾರ ಕೂಡಾ ದಳ್ಳಾಳಿ ಬೂರ್ಜ್ವಾಗಳು ಹಾಗೂ ಭೂಮಾಲಕರ ಪ್ರತಿನಿಧಿಯಾದ್ದರಿಂದ ಈ ಆಳುವ ವರ್ಗಗಳ ಹಿತಾಸಕ್ತಿಗಳನ್ನು ಕಾಪಾಡಿ ಶೋಷಣೆಯನ್ನು ಮುಂದುವರೆಸುವ ಅವಕಾಶ ಉಳಿಸಿಕೊಳ್ಳಬೇಕಾಗಿದೆ. ಇದಕ್ಕಾಗಿಯೇ ಅವರು ಅಮೆರಿಕಾದ ಆರ್ಥಿಕಹಿತಾಸಕ್ತಿಗಳಿಗೆ ಕುಂದು ಬರದಂತೆ ಕೆಲವು ಸುಧಾರಣೆಗಳ ಘೋಷಣೆ ಹೊರಡಿಸಿ ಅದರ ಬಗ್ಗೆ ಫೆಬ್ರವರಿ 2 ರಂದು ರಾಷ್ಟ್ರೀಯ ಜನಾಭಿಪ್ರಾಯ ಸಂಗ್ರಹಣೆಗೆ ಕರೆ ನೀಡಿದರು ಮುಖ್ಯವಾಗಿ ಇದು ಪ್ರಜಾಪ್ರಭುತ್ವದ ಮರುಸ್ಥಾಪನೆಯೆಂದು ಕಂಡ ಫಿಲಿಪೈನ್ಸ್ ಜನತೆ ಅಧಿಕ ಸಂಖ್ಯೆಯಲ್ಲಿ ಇದನ್ನು ಬೆಂಬಲಿಸಿದ್ದಾರೆ.

ಫಿಲಿಫೈನ್ಸ್‌ನಲ್ಲಿ ದಿನ ದಿನಕ್ಕೂ ಕುತೂಹಲಕಾರಿಯಾಗುತ್ತಿರುವ ಬೆಳವಣಿಗೆಗಳನ್ನು ಬಂಡವಾಳಶಾಹಿ ಪತ್ರಿಕೆಗಳು ತಿರುಚುತ್ತಿವೆ. ನಿಜ ಪರಿಸ್ಥಿತಿ ಏನು?

ಮಾರ್ಕೋಸ್ ಕಾಲದಲ್ಲಿ ಫಿಲಿಪೈನ್ಸ್‌ನ್ನು ಅಮೆರಿಕಾದ ಆದೇಶಕ್ಕೆ ಅನುಗುಣವಾಗಿ ನಡೆಸುತ್ತಿದ್ದ ಬಲಪಂಥವಾದೀ ಸೇನಾಪಡೆಗೆ ಅಕ್ವಿನೋ ಸರಕಾರದ ಅಲ್ಪ ಸುಧಾರಣಾ ಕ್ರಮಗಳೂ ಅಪಥ್ಯವಾದುದರಿಂದ ಮಾರ್ಕೋಸ್‌ನ್ನು ಮತ್ತೆ ಅಧಿಕಾರಕ್ಕೆ ತರಲು ಎರಡು ಬಾರಿ ವಿಫಲ ಪ್ರಯತ್ನ ನಡೆಸಿದವು ಮೊದಲು ಜುಲೈ 1986 ರಲ್ಲಿ, ನಂತರ ಈ ವರ್ಷ ಜನವರಿ 27ರಂದು. ಮೊದಲ ಪ್ರಯತ್ನದ ನಂತರ ಸಿ.ಐ.ಎ. ಮಧ್ಯಸ್ಥಿಕೆಯಲ್ಲಿ ನಡೆದ ಸಂಧಾನಗಳ ಪರಿಣಾಮವಾಗಿ ಆಗಿನ ರಕ್ಷಣಾಮಂತ್ರಿ ಎನ್ರೈಲ್ ನಿರ್ಗಮಿಸಿ ಸೇನಾಧ್ಯಕ್ಷ ರಾಮೋಸ್ ಆ ಸ್ಥಾನಕ್ಕೆ ಬರುವಂತಾಯಿತು. ಆ ಸಂಧಾನದ ಇನ್ನೊಂದು ಪರಿಣಾಮವಾಗಿ ಪ್ರಗತಿಪರ ಶಕ್ತಿಗಳ ದಮನವೂ ಆರಂಭವಾಯಿತು. ಭೂಸುಧಾರಣೆ, ವಿದೇಶೀ ಬಂಡವಾಳದ ರಾಷ್ಟ್ರೀಕರಣ ಹಾಗೂ ಅಮೆರಿಕನ್ ಮಿಲಿಟರಿ ನೆಲೆಗಳ ರದ್ದಿಗೆ ಒತ್ತಾಯಿಸುವ ಅತ್ಯಂತ ದೊಡ್ಡ ಸಾಮ್ರಾಜ್ಯಶಾಹಿ-ವಿರೋಧಿ ಶಕ್ತಿಯಾದ ಪೀಪಲ್ಸ್ ಪಾರ್ಟಿಯ ಅಧ್ಯಕ್ಷ ರೋಲಂಡ್ ಒಲಾಲಿಯಾ ಕೊಲೆ ನಡೆಯಿತು. ಮಿಲಿಟರಿಯ ಎರಡನೆಯ ಪ್ರಯತ್ನದಲ್ಲಿ ಇದೇ ರಾಮೋಸ್‌ಗೆ ಅಕ್ವಿನೋ ಪಕ್ಷ ಬಿಟ್ಟು ಮಾರ್ಕೋಸ್ ಪರ ವಹಿಸುವ ಯೋಚನೆಯಿತ್ತಂತೆ.

ಹೀಗೆ ಒಂದೆಡೆ ಬಲಪಂಥೀಯ ಸೇನಾಪಡೆಗಳ ಮೇಲೆ ಹತೋಟಿ ಸಾಧಿಸುತ್ತಾ, ಇನ್ನೊಂದೆಡೆ ಡಿಸೆಂಬರ್ 10 ರಂದು ರಾಷ್ಟ್ರೀಯ ಪ್ರಜಾಪ್ರಭುತ್ವ ರಂಗ (ಎನ್ ಡಿ ಎಫ್) ದೊಂದಿಗೆ 60 ದಿನಗಳ ಕದನವಿರಾಮ ಹಾಗೂ ಮಾತುಕತೆ ಪ್ರಾರಂಭಿಸಿದರು ಅಕ್ವಿನೋ. ಎನ್. ಡಿ. ಎಫ್. 1971 ರಲ್ಲಿ ಸ್ಥಾಪಿಸಲ್ಪಟ್ಟ ಜನತಾ ಕ್ರಾಂತಿಕಾರಿ ಸರ್ಕಾರದ ರಾಜಕೀಯಪ್ರತಿನಿಧಿ. ಫಿಲಿಪೈನ್ಸ್‌ನ ಕಮ್ಯುನಿಸ್ಟ್ ಪಕ್ಷ ಹಾಗೂ ಜನತಾ ಸೇನೆಯ ನೇತೃತ್ವದ ದೀರ್ಘ ಸಶಸ್ತ್ರ ಹೋರಾಟದ ನಂತರ ಸ್ಥಾಪನೆಗೊಂಡ ಈ ಸರಕಾರ ಈಗ ಫಿಲಿಪೈನ್ಸ್‌ನ ಸುಮಾರು ಒಂದು ಕೋಟಿ ಜನಸಂಖ್ಯೆಯಿರುವ ಸುಮಾರು 20% ಪ್ರದೇಶದಲ್ಲಿ ನೇರ ಆಡಳಿತ ನಡೆಸುತ್ತಿದೆ. ಈ ಸರ್ಕಾರದ ತೀವ್ರಗಾಮೀ ಭೂಸುಧಾರಣೆಗಳು ಫಿಲಿಪೈನ್ಸ್‌ನ ಕೋಟ್ಯಾಂತರ ರೈತರಿಗೆ ಒಂದು ಸ್ಫೂರ್ತಿಯ ಚಿಲುಮೆ. ಈ ಸಾಧನೆಗಳನ್ನು ಅಮೇರಿಕನ್ ಹಾಗೂ ಮಾರ್ಕೋಸ್ ಆಕ್ರಮಣಗಳಿಂದ ರಕ್ಷಿಸುತ್ತಾ ಬಂದಿರುವುದು 10ಸಾವಿರ ಸೈನಿಕರು ಹಾಗೂ 1ಲಕ್ಷ 20ಸಾವಿರ ದಸ್ತು ಬೆಂಬಲ ಪಡೆಗಳನ್ನು ಹೊಂದಿರುವ ಜನತಾ ಸೇನೆಯ ಹಿರಿಮೆ.

[6ನೇ ಪುಟನೋಡಿ]

ಕಲ್ಕತ್ತಾ ನಗರ ಸಭೆಗೆ ಮತ್ತೆ ಸಿ. ಪಿ. ಐ. (ಎಂ) ಮೇಯರ್

ಕಾಂಗ್ರೈ ಮುಖಕ್ಕೆ ಮಸಿ ಬಳಿದ ಘಟನೆ

ಕಲ್ಕತ್ತಾ ಕಾರ್ಪೋರೇಶನ್‌ನ ಮೇಯರ್ ಆಗಿ ಸಿ. ಪಿ. ಐ. [ಎಂ] ನ ಅಭ್ಯರ್ಥಿ ಕಾ. ಕಮಲ್ ಕುಮಾರ್ ಬಸು ಅವರು ಅಧಿಕ ಬಹುಮತದಿಂದ ಪುನರಾಯ್ಕೆಗೊಂಡಿದ್ದಾರೆ. ಮಾರ್ಚ್ 23 ರಂದು ಪಶ್ಚಿಮ ಬಂಗಾಳದಲ್ಲಿ ವಿಧಾನಸಭಾ ಚುನಾವಣೆಗಳು ನಡೆಯುವ ಹಿನ್ನೆಲೆಯಲ್ಲಿ ಎಡರಂಗಕ್ಕೆ ಅನಿರೀಕ್ಷಿತವಾಗಿ ಒದಗಿಬಂದ ಈ ವಿಜಯದಿಂದಾಗಿ ಕಾಂಗ್ರೆಸ್ [ಐ]ಗೆ ಭಾರೀ ಮುಖಭಂಗವುಂಟಾಗಿದೆ.

ನಗರಸಭೆಯ ಒಟ್ಟು 147 ಸ್ಥಾನಗಳ ಪೈಕಿ ಕಾ. ಕಮಲ್ ಬಸು ಅವರಿಗೆ 82 ಮತಗಳು ಮತ್ತು ಕಾಂಗ್ರೈ ಅಭ್ಯರ್ಥಿಗೆ 60 ಮತಗಳು ಲಭಿಸಿದವು. ಒಟ್ಟು 144 ಮಂದಿ ಸದಸ್ಯರು ಮತದಾನದಲ್ಲಿ ಭಾಗವಹಿಸಿದರು. ಕಾಂಗ್ರೈನ ಒಬ್ಬರು ಮತ್ತು ಬಿ. ಜೆ. ಪಿ. ಯ ಇಬ್ಬರು ಕೌನ್ಸಿಲರುಗಳು ಮತದಾನದಲ್ಲಿ ಭಾಗವಹಿಸಲಿಲ್ಲ. ಕಾಂಗ್ರೈನ ಸದಸ್ಯಬಲ 72 ಆಗಿದ್ದರೂ ಕೂಡ, ಕಾಂಗ್ರೈ ಅಭ್ಯರ್ಥಿಗೆ ಕೇವಲ 60 ಮತಗಳು ಮಾತ್ರ ದೊರಕಿರುವುದು ಕಾಂಗ್ರೈಗೆ ಅನಿರೀಕ್ಷಿತ ಹೊಡೆತವಾಗಿರುವುದಲ್ಲದೆ ಅದಕ್ಕೆ ಸಾಕಷ್ಟು ಅವಮಾನವುಂಟಾಗಿದೆ.

ಈಚೆಗೆ ಕಲ್ಕತ್ತಾ ನಗರಸಭೆಯ ಚುನಾವಣೆ ಪೂರ್ಣಗೊಂಡಾಗ ಎಡರಂಗಕ್ಕೆ 74 ಸ್ಥಾನಗಳು ಮತ್ತು ಕಾಂಗ್ರೈಗೆ 72 ಸ್ಥಾನಗಳು ದೊರೆತಿದ್ದವು. ಒರ್ವ ಸಿಪಿಐ(ಎಂ)ಸದಸ್ಯರುಮೃತಪಟ್ಟರು. ಎಡರಂಗಕ್ಕೆ ಬೆಂಬಲ ನೀಡಿದ್ದ ಸ್ವತಂತ್ರ ಸದಸ್ಯರೊಬ್ಬರು ಕಾಂಗ್ರೈನ ಪ್ರಚೋದನೆಗೆ ಒಳಗಾಗಿ ಆ ಪಕ್ಷಕ್ಕೆ ಪಕ್ಷಾಂತರ ಮಾಡಿದರು. ಬಿ. ಜೆ ಪಿ.ಯ ಇಬ್ಬರು ಕಾಂಗ್ರೈಗೆ ಸೇರಿದರು. ಈ ಪಕ್ಷಾಂತರವನ್ನು ಪ್ರತಿಭಟಿಸಿ ಕಲ್ಕತ್ತಾ ನಗರದಲ್ಲಿ 10ಸಾವಿರ ಮಂದಿ ಬೃಹತ್ ಪ್ರದರ್ಶನ ನಡೆಸಿದರು. ಕಾಂಗ್ರೈ ತನಗೆ ಬಹುಮತ ಸಿಕ್ಕಿದೆಯೆಂದು ಘೋಷಿಸಿ ಆಡಳಿತಾರೂಢ ಎಡರಂಗದವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಿತು. ಕಾರ್ಪೋರೇಶನ್‌ನಲ್ಲಿ ಎಡರಂಗಕ್ಕೆ ಬಹುಮತವಿಲ್ಲದಿರುವುದರಿಂದ ಅದು ರಾಜೀನಾಮೆ ನೀಡಬೇಕೆಂದು ಎಡರಂಗ ಆದೇಶ ನೀಡಿತು. ಈ ಪ್ರಕಾರ ಮೇಯರ್ ಕಾಂ. ಕಮಲ್‌ಬಸು ಅವರು ಪ್ರಜಾಪ್ರಭುತ್ವದ ಸಂಪ್ರದಾಯದನುಸಾರ ಮೇಯರ್ ಪದವಿಗೆ ರಾಜೀನಾಮೆ ಸಲ್ಲಿಸಿದರು ನಂತರ ಮೇಯರ್ ಪದವಿಗೆ ನಡೆದ ಹೊಸ ಚುನಾವಣೆಯಲ್ಲಿ ಕಾಂ. ಕಮಲ್ ಬಸುರವರು ಮತ್ತೊಮ್ಮೆ ಪ್ರಚಂಡ ಬಹುಮತದಿಂದ ಪುನರಾಯ್ಕೆ ಗೊಂಡರು.

ಈ ಮಹತ್ವದ ವಿಜಯದ ಬಗ್ಗೆ ಪಶ್ಚಿಮ ಬಂಗಾಲದ ಮುಖ್ಯಮಂತ್ರಿ ತಮ್ಮ ಹರ್ಷವನ್ನು ವ್ಯಕ್ತಪಡಿಸಿದ್ದಾರೆ. ನಗರಸಭೆಯ ಕಾರ್ಯಕ್ರಮಗಳ ಅನುಷ್ಠಾನದಲಿ ವಿರೋಧ ಪಕ್ಷಗಳ ಸದಸ್ಯರು ಸಹಕರಿಸುವ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದ್ದಾರೆ. ●

ನಗರ ಸಭೆ ನೌಕರರಿಗೆ ಮೋಸ

ಕರ್ನಾಟಕ ಸರಕಾರ ಮತ್ತು ಬಳ್ಳಾರಿ ಆಧಾರಿತ ಸಿವಿಕ್ ಎಂಪ್ಲಾಯೀಸ್ ಅಸೋಸಿಯೇಶನ್ ಫೆಬ್ರವರಿ 5ರಿಂದ ಮುಷ್ಕರದಲ್ಲಿದ್ದ 25ಸಾವಿರಕ್ಕೂ ಹೆಚ್ಚು ಪೌರಕಾರ್ಮಿಕರಿಗೆ ದ್ರೋಹ ಬಗೆದಿದ್ದಾರೆ. ತಮಗೆ 4-5 ತಿಂಗಳು ನಗರಸಭೆಯಿಂದ ಸಂಬಳ ಸಿಗುತ್ತಿಲ್ಲ, ವೇತನ ವಿತರಣೆಯ ಜವಾಬ್ದಾರಿಯನ್ನು ಸರಕಾರವೇ ವಹಿಸಿಕೊಂಡು ಖಜಾನೆ ಮೂಲಕ ವೇತನ ವಿತರಣೆಯಾಗಬೇಕೆಂಬ ಬೇಡಿಕೆಯನ್ನು ಒಪ್ಪಿಕೊಳ್ಳದೆ 19ದಿನಸ ಮುಷ್ಕರದ ನಂತರ ಆ ಸಮಸ್ಯೆಯ ಕುರಿತು ವರದಿ ಸಲ್ಲಿಸಲು ಒಂದು ಕಮಿಟಿ ನೇಮಿಸುವುದಕ್ಕೆ ಒಪ್ಪಿಕೊಂಡಿರುವುದು ಬಹಳ ಅನ್ಯಾಯ ಮಾಡಿದಂತಾಗಿದೆ. ಆ ಸಮಸ್ಯೆಯ ಪರಿಹಾರಕ್ಕೆ ಒಕ್ಕೂಟ ಈಗಾಗಲೇ ಉಪಾಯಗಳನ್ನು ಸೂಚಿಸಿದ್ದು ಸರಕಾರ ಪೌರ ಕಾರ್ಮಿಕರು ಮುಷ್ಕರ ಹೂಡಿದಾಗಲಾದರೂ ಆ ಸೂಚನೆಗಳನ್ನು ಗಂಭೀರವಾಗಿ ಪರಿಗಣಿಸದೆ ಈಗ ಒಂದು ಸಮಿತಿ ನೇಮಿಸುವ ಸೂಚನೆ ಮಾಡಿರುವುದರಿಂದ ಮತ್ತೆ ಪೌರ ಕಾರ್ಮಿಕರು ವೇತನವಿಲ್ಲದೆ ಉಪವಾಸ ಬೀಳಬೇಕಾಗಿ ಬಂದಿದೆ. ಮುಷ್ಕರದಲ್ಲಿದ್ದ 19 ದಿವಸಗಳಿಗೆ ವೇತನ ನೀಡದೆ ಕೆಲಸಗಾರರ ರಜೆಗಳಿಗೆ ಅದನ್ನ ಹೊಂದಾಣಿಕೆ ಮಾಡಿ, ಕೆಲಸಗಾರರು ರಜೆಯ ಸೌಲಭ್ಯವನ್ನು ಕಳೆದುಕೊಳ್ಳುವಂತೆ ಮಾಡಿದೆ. ಆ ಒಪ್ಪಂದವನ್ನು ನಮ್ಮ ಒಕ್ಕೂಟ ಖಂಡಿಸುತ್ತದೆ ಎಂದು ಕರ್ನಾಟಕ ರಾಜ್ಯ ಪೌರ ಕಾರ್ಮಿಕರ ಒಕ್ಕೂಟದ ಅಧ್ಯಕ್ಷರಾದ ಎನ್. ಕೆ. ಉಪಾಧ್ಯಾಯರು ಪತ್ರಿಕಾ ಹೇಳಿಕೆ ಹೊರಡಿಸಿದ್ದಾರೆ.

ಬಿಹಾರ: "ಸರ್ಕಾರೀ ಕಚೇರಿಗಳು ಸ್ಮಶಾನದಂತೆ ಹಾಳು ಸುರಿಯುತ್ತಿದ್ದವು"

ಸರ್ಕಾರೀ ನೌಕರರ ಮತ್ತು ಶಿಕ್ಷಕರ ಅನಿರ್ದಿಷ್ಟ ಕಾಲದಮುಷ್ಕರ ಮುಂದುವರಿಯುತ್ತಿದೆ.ರಾಜ್ಯ ಸರ್ಕಾರ ಮುಷ್ಕರವನ್ನು ಮುರಿಯಲು ಸಕಲ ಪ್ರಯತ್ನಗಳನ್ನು ಮಾಡುತ್ತಿದೆ. ಫೆಬ್ರವರಿ 7ರ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯ ಪ್ರಕಾರ ಒಂದು ಸಾವಿರ ನೌಕರರಿಗೆ ಸಸ್ಪೆನ್ಷನ್ ಆಜ್ಞೆ ಜಾರಿ ಮಾಡಲಾಗಿದೆ. ನಾಲ್ಕು ಸಾವಿರ ನೌಕರರ ಮೇಲೆ ಶೋಕಾಸ್ ನೋಟೀಸ್ ನೀಡಲಾಗಿದೆ. ಹೋರಾಟ ನಿರತ ನೌಕರರ ಮುಖಂಡರುಗಳನ್ನು ಮೀಸಾ ಮತ್ತು ಎಸ್ಮಾಗಳ ಅನ್ವಯ ಬಂಧಿಸಲಾಗಿದೆ. ಫೆಬ್ರವರಿ 9 ರಂದು ರಾಜ್ಯದ ಇಡೀ ಶಿಕ್ಷಕರ ವರ್ಗವನ್ನು ಅಮಾನತ್ತುಗೊಳಿಸಿ ಸರ್ಕಾರ ಆಜ್ಞೆ ಹೊರಡಿಸಿದೆ. ತನ್ನ ಪೋಲೀಸರ ಶಕ್ತಿಯಲ್ಲಿ ನಂಬಿಕೆ ಸಾಲದೆ ಪ್ಯಾರಾ ಮಿಲಿಟರಿ ಪಡೆಗಳಿಗಾಗಿ ಈ ಸರ್ಕಾರ ಕೇಳಿಕೊಂಡಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದಾಗಿದೆ.

ಜನವರಿ 20 ರಂದು 15 ಅಂಶಗಳ ಬೇಡಿಕೆಯನ್ನು ಮುಂದಿಟ್ಟು ರಾಜ್ಯ ಸರ್ಕಾರಿ ನೌಕರರ ಮತ್ತು ಶಿಕ್ಷಕರ ಸಮನ್ವಯ ಸಮಿತಿ ಮತ್ತು ಬಿಹಾರ (ರಾಜ್ಯ ಸರ್ಕಾರಿ ನೌಕರರ ಅಧಿಕಾರಿಗಳ ಮತ್ತು ಶಿಕ್ಷಕರ ಸಮನ್ವಯ ಸಮಿತಿ ಜಂಟಿಯಾಗಿ ಮುಷ್ಕರವನ್ನು ಪ್ರಾರಂಭಿಸಿದ್ದವು. ಇವರ ಬಹು ಮುಖ್ಯ ಬೇಡಿಕೆಯೆಂದರೆ, ಸಂವಿಧಾನದಲ್ಲಿ ಸೂಚಿಸಲಾಗಿರುವ ಮತ್ತು ಅನೇಕ ಸಂದರ್ಭಗಳಲ್ಲಿ ಸುಪ್ರೀಂಕೋರ್ಟ್ ಎತ್ತಿ ಹಿಡಿದಿರುವ ಸಮಾನ ಕೆಲಸಕ್ಕೆ ಸಮಾನ ವೇತನ ಎಂಬ ತತ್ವದ ಅನುಸಾರವಾಗಿ ಕೇಂದ್ರ ಸರ್ಕಾರೀ ನೌಕರರ ವೇತನಕ್ಕೆಸಮಾನವಾದ ವೇತನವನ್ನು ಜ್ಯಾರಿ ಮಾಡಬೇಕು ಎಂಬುದಾಗಿದೆ.

ಬಿಹಾರದಲ್ಲಿನ ಈಗಿನ ಪರಿಸ್ಥಿತಿ ಹೇಗಿದೆಯೆಂದರೆ ರಾಜ್ಯ ಸೆಕ್ರೆಟೇರಿಯೇಟ್‌ನಿಂದ ಬ್ಲಾಕ್‌ಮಟ್ಟದ ವರೆಗಿನ ಎಲ್ಲಾ ಸರ್ಕಾರೀ ಕಚೇರಿಗಳೂ ಸ್ಮಶಾನದಂತೆ ಹಾಳು ಸುರಿಯುತ್ತಿವೆ.ಪ್ರೈಮರಿ ಶಾಲೆಯಿಂದ ಪ್ರೌಢಶಾಲೆಯ ವರೆಗೂ ಯಾವ ಶಾಲೆಯಲ್ಲೂ ಶಿಕ್ಷಕರು ಕಂಡು ಬರುತ್ತಿಲ್ಲ. ನ್ಯಾಯಾಲಯಗಳು, ಆಸ್ಪತ್ರೆಗಳು, ಆರೋಗ್ಯ ಕೇಂದ್ರಗಳು ಮತ್ತಿತರ ಎಲ್ಲಾ ಕಚೇರಿಗಳೂ ನಿರ್ಜನವಾಗಿವೆ. ಕಚೇರಿಯ ಗೇಟುಗಳಿಗೆ ಭಾರವಾದ ಬೀಗಗಳು ತೂಗಾಡುತ್ತಿವೆ.

ಈ ಮುಷ್ಕರ ಇದ್ದಕ್ಕಿದ್ದಂತೆ ಉದ್ಭವಿಸಿದ್ದೇನಲ್ಲ. ಆರು ಲಕ್ಷ ಸರ್ಕಾರೀ ನೌಕರರ ಮತ್ತು ಶಿಕ್ಷಕರ ಬಹುಕಾಲದ ನ್ಯಾಯಯುತ ಬೇಡಿಕೆಗಳತ್ತ ಗಮನಿಸದೆ ಸದ್ದೆ ಮಾಡುತ್ತಿದ್ದ ಸರ್ಕಾರದ ನಿರ್ಲಕ್ಷದ ಪರಿಣಾಮ ಈ ಮುಷ್ಕರ. ಮುಷ್ಕರಕ್ಕೆ ಒಂದು ತಿಂಗಳ ಮೊದಲೇ ಸರ್ಕಾರಕ್ಕೆ ನೋಟೀಸ್ ನೀಡಲಾಗಿದ್ದರೂ ಸರ್ಕಾರ ಅಸಡ್ಡೆಯಿಂದವರ್ತಿಸಿತು.

ಈ ಮಹತ್ತರ ಹೋರಾಟಕ್ಕೆ ಬೆಂಬಲ ಕೋರಿ ಜನವರಿ 24ರಂದು ಪಾಟ್ನಾದಲ್ಲಿ ನಡೆಸಿದ ಬೃಹತ್ ಸಭೆಯಲ್ಲಿ ಸಿ.ಐ.ಟಿ.ಯು.ನ ಕಾ. ಚಂಡಿಪ್ರಸಾದ್ ಸಿ.ಪಿ.ಐ ನ ಕಾ. ಇಂದ್ರದೀಪ್ ಸಿನ್ಹಾ, ಸಿ.ಪಿ.ಐ. [ಎಂ]ನ ಕಾ. ಶ್ರೀಕಾಂತ್ ಶರ್ಮ ಮಾಜೀ ಮುಖ್ಯಮಂತ್ರಿಗಳಾದ ರಾಮಸುಂದರ ದಾಸ್ ಮತ್ತು ಜಗನ್ನಾಥ ಮಿಶ್ರ ಅವರುಗಳು ಮಾತನಾಡಿದರು.

ಕಾರ್ಲ್ ಮಾರ್ಕ್ಸ್ ಹಾಗೂ ನಮ್ಮ ಬಜೆಟ್‌ಗಳು

ಕೇಂದ್ರ ಸರಕಾರದ ಬಜೆಟ್ ಹಾಗೂ ರಾಜ್ಯದ ಬಜೆಟ್‌ಗಳು ಸರಿ ಸುಮಾರು ಒಮ್ಮೆಗೇ ಮಂಡಿತವಾಗುತ್ತಿವೆ. ಈಗಾಗಲೇ ಒಂದೆರಡು ವಾರಗಳಿಂದ ದೇಶದ ಎಲ್ಲಾ ಪತ್ರಿಕೆಗಳಲ್ಲಿ ಮುಂಬರುವ ಕೇಂದ್ರ ಬಜೆಟ್ ಹೇಗಿರಬಹುದು? ಚರ್ಚೆಯೇ ಚರ್ಚೆ. ಈ ಚರ್ಚೆ ಇನ್ನೂ ಹಲವು ವಾರ ಮುಂದುವರಿಯುತ್ತದೆ. ದುಡಿಯುವ ವರ್ಗ ಈ ಬಗ್ಗೆ ಮೂಕವಾಗಿರಲು ಸಾಧ್ಯವೇ?

ದೇಶದಲ್ಲೆಡೆಯಲ್ಲಿ ಪತ್ರಿಕೆಗಳ ತುಂಬಾ ಬಜೆಟ್ ಬಗ್ಗೆ ಚರ್ಚೆ. ಈ ಬಜೆಟ್ ಎಂದರೇನು? ದುಡಿಯುವವರ್ಗ ಈ ಬಜೆಟ್‌ಗಳನ್ನು ಹೇಗೆ ನೋಡಬೇಕು? ದುಡಿಯುವ ವರ್ಗಕ್ಕೆ ಜಾಗತಿಕ ಕಣ್ಣೋಟವನ್ನು ಒದಗಿಸಿದ ಅಪ್ರತಿಮ ಕ್ರಾಂತಿಕಾರಿ ಕಾರ್ಲ್ ಮಾರ್ಕ್ಸ್ 1860ರ ದಶಕದಲ್ಲಿಯೇ ವಿಂಗಡಿಸಿಟ್ಟಿದ್ದಾರೆ.

(ಓದ ಬಯಸುವವರು ಕಾರ್ಲ್ ಮಾರ್ಕ್ಸ್ ಎಂಗೆಲ್ಸ್ ಕೃತಿಶ್ರೇಣಿಯ 12 ನೇ ಸಂಪುಟದ ಪುಟ 63 ಹಾಗೂ 'ಕ್ಯಾಪಿಟಲ್‌ನ' ಮೊದಲ ಸಂಪುಟ ಪು.706 ರಿಂದ 709 ನ್ನು ನೋಡಿ).

ಮಾರ್ಕ್ಸ್‌ರವರ ದೃಷ್ಟಿಯಲ್ಲಿ ವರ್ಗ ಸಮಾಜದಲ್ಲಿ ಬಜೆಟ್ ಎಂದರೆ ಬಂಡವಾಳಶಾಹಿ ವರ್ಗದ ಶೋಷಣೆಯ ಸಾಧನೆ.

ಕೋಟ್ಯಾಂತರ ಜನ ದುಡಿದು ಬೆವರು ಹರಿಸಿ ಪಡೆದ ರಾಷ್ಟ್ರೀಯ ಆದಾಯದಲ್ಲಿ ಕೇವಲ ಜೀವ ಹಿಡಿದಿಟ್ಟುಕೊಳ್ಳುವುದಕ್ಕೆ ಮಾತ್ರ, ತಮ್ಮ ಸೇವೆ ಮಾಡಲು ಎಷ್ಟು ಅಲ್ಪ ಶಕ್ತಿ ಬೇಕೋ ಅಷ್ಟನ್ನು ಹಾಗೂ ಮುಂದೆ ತಮಗೆ ಬೇಕಾದ ಕಾರ್ಮಿಕರನ್ನು ಹುಟ್ಟಿಸಿ ಬೆಳೆಸುವುದಕ್ಕೆ ಎಷ್ಟು ಬೇಕೋ ಅಷ್ಟು ಮಾತ್ರ ದುಡಿಯುವ ಜನಕ್ಕೆ ಕಾರ್ಮಿಕರಿಗೆ, ಕೃಷಿ ಕಾರ್ಮಿಕರಿಗೆ ನೌಕರವರ್ಗಕ್ಕೆ ರೈತರಿಗೆ ಕೊಟ್ಟು ಉಳಿದುದೆಲ್ಲವನ್ನು ತಾವು ಲಾಭ ಪಡೆಯಲು, ತೆರಿಗೆಯನ್ನು ವಂಚಿಸಿ ಕಪ್ಪು ಹಣವಾಗಿಸಲು ಬಾಚಿ ಬಳಿದಿಟ್ಟುಕೊಳ್ಳುವುದಕ್ಕೆ ಜನಸಾಮಾನ್ಯರ ಕಣ್ಣಿಗೆ ಮಣ್ಣೆರಚಿ ಹಾಡು ಹಗಲೇ ದರೋಡೆ ಮಾಡುವ ವಿಧಾನಕ್ಕೆ ಬಜೆಟ್ ಎಂಬ ಹೆಸರು ನೀಡಲಾಗಿದೆ.

ರಾಷ್ಟ್ರೀಯ ಸಾಲಗಳು

ಬಂಡವಾಳಶಾಹೀ ವ್ಯವಸ್ಥೆ ತಾನು ಹುಟ್ಟಿದ ಕೂಡಲೇ ಜನರ ಕಣ್ಣಿಗೆ ಮಣ್ಣೆರಚುವ ಅನೇಕ ತಂತ್ರಗಳನ್ನು ಹುಡುಕಿಟ್ಟಿದೆ. ಈ ಬಜೆಟ್ ತಂತ್ರಗಳಲ್ಲಿ ಒಂದು "ಸಾರ್ವಜನಿಕರಿಂದ ಸಾಲ" (Public Debt) (ವಿದೇಶಗಳಿಂದ ನಮ್ಮ ದೇಶ ಪಡೆಯುವ ಸಾಲವಲ್ಲ ಆ ಬಗೆ ಮುಂದೆ ಬರುತ್ತದೆ.) ನಮ್ಮ ದೇಶದ ಜನಗಳಿಂದಲೇ ಸರಕಾರ ಎತ್ತುವ ಸಾಲ. ಇದು ಸಾಮಾನ್ಯವಾಗಿ ಸರ್ಕಾರಿ ಬಾಂಡ್‌ಗಳು ಡಿಬೆಂಚರ್‌ಗಳ ರೂಪದಲ್ಲಿ ಇರುತ್ತದೆ. ಈ ಬಗ್ಗೆ ಮಾರ್ಕ್ಸ್‌ರವರು ಹೇಳುತ್ತಾರೆ:-

"ರಾಷ್ಟ್ರೀಯ ಸಾಲಗಳು ಅಥವಾ ಸಾರ್ವಜನಿಕರಿಂದ ಪಡೆದ ಸಾಲವೆಂಬುದು ಮಧ್ಯಯುಗದಲ್ಲಿಯೇ ಜಿನೋವ ಹಾಗೂ ವೆನಿಸ್ (ಎರಡೂ ನಗರಗಳೂ ಇಟಲಿಯಲ್ಲಿವೆ) ಗಳಲ್ಲಿ ಹುಟ್ಟಿತು. ಕೈಗಾರಿಕೆಯ ಬೆಳವಣಿಗೆಯ ಹಂತದಲ್ಲಿಯೇ ಇಡೀ ಯುರೋಪ್ ದೇಶವನ್ನು ಆವರಿಸಿತು. ರಾಷ್ಟ್ರೀಯ ಸಾಲಗಳು ಎಂದರೆ ಪ್ರಜಾಪ್ರಭುತ್ವವನ್ನೇ ಒತ್ತೆಯಿಡುವುದು ಎಂಬ ಈ ಪದ್ಧತಿ ಬಂಡವಾಳಶಾಹೀ ಯುಗ ಆರಂಭವಾದುದನ್ನು ತನ್ನ ಮುದ್ರೆಯನ್ನೊತ್ತಿ ಗುರುತಿಸಿತು"

ಇಂದು ಆಧುನಿಕ ಜನಾಂಗಗಳಲ್ಲಿ ಎಲ್ಲರ ಒಡೆತನಕ್ಕೆ ಸೇರಿರುವ ಒಂದೇ ಒಂದು ರಾಷ್ಟ್ರೀಯ ಸಂಪತ್ತು ಎಂದರೆ ಈ ರಾಷ್ಟ್ರೀಯ ಸಾಲವೊಂದೇ ಎನ್ನುತ್ತಾರೆ ಮಾರ್ಕ್ಸ್ "ರಾಷ್ಟ್ರೀಯ ಸಾಲ ಎಂಬುದು ಬಂಡವಾಳ ಸಂಗ್ರಹದ ಅತ್ಯಂತ ಶಕ್ತಿಯುತ ಸಾಧನ. ಮಂತ್ರವಾದಿಯ ಕೈಯ ಮಂತ್ರ ದಂಡದಂತೆ ಇದನ್ನೊಮ್ಮೆ ಬೀಸಿದರೆ ಸಾಕು ಶ್ರೀಮಂತರ ಮನೆಗಳಲ್ಲಿ ಹುಳುಹಿಡಿಯುತ್ತಿದ್ದ ಹಣ ತಂತಾನೆ ವೃದ್ಧಿಯಾಗುತ್ತದೆ. ಬಂಡವಾಳವಾಗಿ ಪರಿವರ್ತನೆ ಹೊಂದುತ್ತದೆ."

ದೇಶಕ್ಕೇ ಹಣ ಸಾಲ ನೀಡಲು ಮುಂದಾಗಬಹುದಾದವರು ಯಾರು? ಯಾರ ಬಳಿ ಹಣ ಹುಳಿತುಹೋಗುವಷ್ಟಿದೆಯೋ ಅಂತಹ ಶ್ರೀಮಂತರು-ಬಂಡವಾಳಶಾಹಿಗಳು ಮಾತ್ರ. ಆದರೆ ತಮಾಷೆ ನೋಡಿ. ಸರಕಾರಕ್ಕೆ ಸಾಲ ನೀಡುವ ಈ ದುಡ್ಡಿನ ದೊಡ್ಡಪ್ಪಗಳು ಅದರಿಂದ ಏನನ್ನೂ ಕಳೆದುಕೊಳ್ಳುವುದಿಲ್ಲ ಎನ್ನುತ್ತಾರೆ ಮಾರ್ಕ್ಸ್‌ರವರು. ಅವರು ಸರಕಾರಕ್ಕೆ ಸಾಲಕೊಟ್ಟದ್ದಕ್ಕೆ ಪಡೆದ ಬಾಂಡ್‌ಗಳನ್ನು ಮತ್ತೆ ರೂಪಾಯಿನ ಕಟ್ಟುಗಳಂತೆಯೇ ವ್ಯವಹಾರದಲ್ಲಿ ತೊಡಗಿಸುತ್ತಾರೆ.

ವಿದೇಶೀ ಸಾಲಗಳು

ರಾಷ್ಟ್ರೀಯ ಸಾಲದ ಜೊತೆಗೇ ಅಂತರರಾಷ್ಟ್ರೀಯ ಸಾಲದ ವ್ಯವಸ್ಥೆಯೂ ರೂಪುಗೊಂಡಿತು. ಎಲ್ಲೆಲ್ಲಿಯೊ ಕಳ್ಳ ಜನ್ಮ ಪಡೆದ ಬಂಡವಾಳ ನಮ್ಮ ದೇಶದಲ್ಲಿ ರಾರಾಜಿಸುವ ಈ ಪದ್ಧತಿಯ ಜೊತೆಗೆ ಸಾಮ್ರಾಜ್ಯಶಾಹೀ ಯುಗದಲ್ಲಿ ಬಂಡವಾಳವನ್ನೇ ರಫ್ತು ಮಾಡುವ ವಿಶ್ವ ಬ್ಯಾಂಕ್ ಐಎಂ ಎಫ್. ಹಾಗೂ ಅಮೇರಿಕಾ ಜಪಾನ್‌ಗಳ ವಿದೇಶಿ ಬ್ಯಾಂಕ್‌ಗಳ ಸಾಲದ ಹೊರೆ ಹೇರಿಕೊಂಡಿತು. ನಮ್ಮ ಮೇಲಿರುವ ಅಂತರಿಕ ಹಾಗೂ ವಿದೇಶಿ ಸಾಲದ ಹೊರೆ ಬಗ್ಗೆ ಬಾಕ್ಸ್ ನೋಡಿ.

ತೆರಿಗೆ ಪದ್ಧತಿ

ಈ ಸಾಲಗಳನ್ನು ಮಾಡಿದ ಮೇಲೆ ಅದನ್ನು ತೀರಿಸುವುದು ಹೇಗೆ? "ಈ ಸಾಲಗಳು ಆಳುವವರ್ಗದ ಸರಕಾರದ ತುರ್ತು ಖರ್ಚುಗಳನ್ನು ಅದು ತಕ್ಷಣವೇ ತೆರಿಗೆದಾರರನ್ನು ಸುಡದಂತೆ ಮಾಡುವುದಕ್ಕಾಗಿಯೇ ಇರುವುದು. ಅದರ ಫಲವೇ ತೆರಿಗೆಗಳನ್ನು ಹೆಚ್ಚಿಸಬೇಕಾಗಿ ಬರುವ ಅವಶ್ಯಕತೆ. ಒಂದರ ಮೇಲೊಂದು ಪಡೆದ ಸಾಲಗಳನ್ನು ತೀರಿಸುವುದಕ್ಕೆ ತೆರಿಗೆಗಳನ್ನು ಏರಿಸಬೇಕಾದರೆ, ಮತ್ತೆ ಸರಕಾರದ ವೆಚ್ಚಕ್ಕಾಗಿ ಹೊಸ ಹೊಸ ಸಾಲಗಳನ್ನು ಮಾಡುತ್ತಲೇ ಇರಬೇಕಾಗುತ್ತದೆ. ಹೀಗೆ ಅತ್ಯಂತ ಜೀವನಾವಶ್ಯಕ ವಸ್ತುಗಳ ಮೇಲೆ ತೆರಿಗೆ ಹೇರುವುದು (ಅದರ ಫಲವಾಗಿ ಬೆಲೆ ಏರುವುದು) ಆಧುನಿಕ ಅರ್ಥ ನಿರ್ವಹಣೆ (ಬಜೆಟ್‌ನ)ಯ ಆಧಾರ ಬಿಂದುವಾಗಿದೆ, ಅದರ ಹೊಟ್ಟೆಯೊಳಗೇ ಈ ತೆರಿಗೆ ಹೇರಿಕೆ ಇನ್ನಷ್ಟು, ಮತ್ತಷ್ಟು ಹೆಚ್ಚಲೇಬೇಕಾದ ಅವಶ್ಯಕತೆಯ ಬೀಜವನ್ನಿರಿಸಿಕೊಂಡಿದೆ" ಆದುದರಿಂದ ಅತಿ ತೆರಿಗೆ ಎನ್ನುವುದು ಏನೋ ಅಕಸ್ಮಿಕವಾಗಿ ಬಂದೊದಗಿರುವುದಲ್ಲ ಅದೊಂದು ಶಾಶ್ವತ ತತ್ವದ ರೂಪು ತಳೆತಿದೆ" ಎನ್ನುತ್ತಾರೆ ಮಾರ್ಕ್ಸ್.

ಈ ತೆರಿಗೆ ಪದ್ಧತಿ ಮೊಟ್ಟ ಮೊದಲಿಗೆ ಆರಂಭವಾದ ಹಾಲೆಂಡ್‌ನಲ್ಲಿ ಡೇವಿಡ್ ಎಂಬ ಒಬ್ಬ ದೊಡ್ಡ ದೇ.ಭ. (ದೇಶಭಕ್ತ) ತನ್ನ "ಸುಭಾಷಿತ" ಗಳಲ್ಲಿ ಹೇಳುತ್ತಾನಂತೆ "ಈ ಪದ್ಧತಿ ಕೂಲಿಕಾರರನ್ನು ವಿಧೆಯನನ್ನಾಗಿ, ಜಿಪುಣನನ್ನಾ ಚುರುಕಿನ ಕೆಲಸಗಾರನನ್ನಾಗಿ ಮಾಡುತ್ತದೆ". ಎಂದು

ಕೂಲಿಕಾರರು ಮಾತ್ರವೇ? ಈ ಪದ್ಧತಿ "ರೈತರನ್ನು, ಕುಶಲ ಕರ್ಮಿಗಳನ್ನು ಒಂದೇ ಮಾತಿನಲ್ಲಿ ಹೇಳುವುದಾದರೆ ಕೆಳ ಮಧ್ಯಮ ವರ್ಗದ ಜನರನ್ನು ಬಲವಂತವಾಗಿ ಅವರ ನೆಲೆಗಳಿಂದ ಎಬ್ಬಿಸಿ ಹೊರದೂಡುತ್ತದೆ" ಎನ್ನುತ್ತಾರೆ. ಮಾರ್ಕ್ಸ್

[8ನೇ ಪುಟ ನೋಡಿ]

ಬಂಡವಾಳಶಾಹೀ ದೇಶಗಳಲ್ಲಿ ಬಜೆಟ್ ಎಂದರೆ....

ಬಂಡವಾಳಶಾಹೀ ದೇಶಗಳಲ್ಲಿ ಬಜೆಟ್ ಎಂದರೆ ಅದೊಂದು ವರ್ಗ ಬಜೆಟ್ ಬಂಡವಾಳಶಾಹೀ ವರ್ಗದ ಬಜೆಟ್. ರಾಷ್ಟ್ರೀಯ ಆದಾಯವನ್ನು ವಿವಿಧ ವರ್ಗ ಹಾಗೂ ಗುಂಪುಗಳು ಪರಸ್ಪರ ಹಂಚಿಕೊಳ್ಳುವುದರ ಪ್ರಮಾಣವನ್ನು ವ್ಯಕ್ತಪಡಿಸುತ್ತದೆ. ಈ ವೆಚ್ಚದ ಬಹುಭಾಗ ಮಿಲಿಟರಿ ವೆಚ್ಚಕ್ಕೆ ಕಾರ್ಮಿಕ ವರ್ಗದ ಮರ್ದನೆ ಮಾಡುವುದಕ್ಕೆಬೇಕಾದ ಆಡಳಿತ ಯಂತ್ರವನ್ನು, ಪರೋಪಜೀವಿಯಾದ ರಾಜ್ಯಯಂತ್ರವನ್ನು ಭರಿಸುವುದಷ್ಟೇ ಈ ಬಜೆಟ್‌ನ ಬಹಳಷ್ಟು ಉಪಯೋಗ.

ಕಾರ್ಲ್ ಮಾರ್ಕ್ಸ್

ದೇಶದ ಮೇಲಿರುವ ಸಾಲದ ಹೊರೆ ಒಂದು ಲಕ್ಷಕೋಟಿ

ಇಂದು ನಮ್ಮ ದೇಶದ ಮೇಲಿರುವ ಸಾಲದ ಹೊರೆ - ದೇಶದ ಒಳಗಡೆ ಎತ್ತಿದ ಹಾಗೂ ವಿದೇಶಗಳಿಂದ ಪಡೆದ ಒಟ್ಟು ಸಾಲದ ಹೊರೆ 86-87 ರ ವೇಳೆಗೆ ಒಂದು ಲಕ್ಷ 8 ಸಾವಿರ ಕೋಟಿಯನ್ನು ಮೀರಿದೆ. ಇದರಲ್ಲಿ ಅಂತರಿಕ ಸಾಲ-ಬಾಂಡ್‌ಗಳ ಮೂಲಕ ಶ್ರೀಮಂತರಿಂದ ಎತ್ತಿದ ಸಾಲವೇ ಸುಮಾರು 80,000 ಕೋಟಿ ರೂಗಳಷ್ಟು. ಒಟ್ಟು ನಮ್ಮ ದೇಶದ, ಈಗ ತಾನೆ ಹುಟ್ಟಿದ ಮಗುವನ್ನೂ ಸೇರಿಸಿ ಪ್ರತಿಯೊಬ್ಬ ಪ್ರಜೆಯ ಮೇಲೂ, 1500 ರೂಗಳಷ್ಟು ಸಾಲವಿದೆ. ಇಂದಲ್ಲ ಮುಂದೆ ಯಾದರೂ ತೆರಿಗೆಗಳ ಮೂಲಕ ತೀರಿಸಲೇಬೇಕು.

ಕೊರತೆ ಬಜೆಟ್ - ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಲ್ಲಿ

ಈ ಎಲ್ಲಾ ಸಾಲ, ಅತೀವ ತೆರಿಗೆ ಹೊರೆ ಇವುಗಳಿಂದಲೂ ತೀರದ ಹಣ ದಾಹಕ್ಕೆ ಬಹಳ ಸುಲಭವಾದ ಒಂದು ಸೂತ್ರವನ್ನು ಬಂಡವಾಳಶಾಹಿ ತನ್ನ ಆರಂಭದಲ್ಲಿಯೇ ರೂಪಿಸಿದ್ದಾನೆ. ಅದು, ಬ್ಯಾಂಕ್ ಆದೇಶ ನೀಡಿ ಯಾವ ಆಧಾರವೂ ಇಲ್ಲದೇ ನೋಟುಗಳನ್ನು ಮುದ್ರಿಸುತ್ತಾ ಹೋಗುವುದು. ರಾಜೀವ್ ಗಾಂಧಿಯವರು ಹೊಸ ಆರ್ಥಿಕ ನೀತಿಯನ್ನು ಆರಂಭಿಸಿದಂದಿನಿಂದ ಈ ಕೊರತೆ ಬಜೆಟ್ ಏರುತ್ತಲೇ ಇದೆ. 1000-1500 ಕೋಟಿಯ ವರೆಗೆ ಮಾತ್ರ ಇರುತ್ತಿದ್ದ ಕೊರತೆ ಈಗ 85-86ರಲ್ಲಿ ಒಟ್ಟು 6100 ಕೋಟಿ ಮುಟ್ಟಿದೆ. 86-87ರಲ್ಲಿಯೂ 5000 ಕೋಟಿಯನ್ನು ದಾಟುವುದರಲ್ಲಿ ಸಂಶಯವೇ ಇಲ್ಲ.

ಕುಟುಂಬದ ಬಜೆಟ್‌ನಲ್ಲಿ

ಇಷ್ಟು ಹಣ ಯಾವ ಆಧಾರವೂ ಇಲ್ಲದೆ, ಚಲಾವಣೆಗೆ ಬಂದರೆ ಏನು ಪರಿಣಾಮ? ಕೊರತೆ ಬಜೆಟ್ ಎಂದ ಕೂಡಲೇ ದುಡಿಯುವವರ್ಗವೆಲ್ಲಾ ನೆನಪಿಡಬೇಕಾದ್ದೆಂದರೆ ಅದು ಅವರ ಜೇಬಿಗೆ ನೇರವಾಗಿ ಕೊಡೆದ ಸುರಂಗ ಎಂಬುದು. ತೆರಿಗೆಗಳನ್ನು ಬೆಲೆಗಳನ್ನು ನೇರವಾಗಿ ಏರಿಸುವುದರ ಜೊತೆಗೆ ದೇಶದಲ್ಲಿ ಹರಿಬಿಟ್ಟ ನೋಟುಗಳ ಹೊಳೆ ತಾನೇ ತಾನಾಗಿ ಹಣದುಬ್ಬರಕ್ಕೆ ಕಾರಣವಾಗುತ್ತದೆ. ಕೊಳ್ಳಬಹುದಾದ ವಸ್ತುಗಳ ಪ್ರಮಾಣ ಕುಗ್ಗಿ ಹಣದ ಪ್ರಮಾಣ ಇದ್ದಕ್ಕಿದ್ದಂತೆ ಹೆಚ್ಚಿದಾಗ ಬೆಲೆ ಏರುವುದರಲ್ಲಿ ಯಾವ ಸಂಶಯವೂ ಇಲ್ಲ ಹೀಗೆ ತೆರಿಗೆ, ಸಾಲ ಇವುಗಳ ಜೊತೆಗೆ ಅತೀವ ಹಣ ಚಲಾವಣೆಯೂ ಕೂಡಿದಾಗ ಬೆಲೆಗಳು ಒಮ್ಮೆಗೇ ಸರಕ್ಕನೇ ಏರುತ್ತವೆ. ನೋಡ ನೋಡುತ್ತಿರುವಂತೆಯೇ ನಮ್ಮ ತಿಂಗಳ ವೆಚ್ಚ ಮೇಲೇರುತ್ತದೆ. ಕುಟುಂಬದ ಬಜೆಟ್‌ನಲ್ಲಿ ದೊಡ್ಡ ಕೊರತೆ, ಕೊರತೆ ಏನು ಕಂದರವೇ ಬೀಳುತ್ತದೆ. ಆದುದರಿಂದ ಅಪ್ರತ್ಯಕ್ಷ ತೆರಿಗೆಗಳಲ್ಲಿ ಜೀವನಾವಶ್ಯಕ ವಸ್ತುಗಳ ಮೇಲೆ ತೆರಿಗೆಗಳಲ್ಲಿ ಆಗುವ ಏರಿಕೆ ದೇಶದ ಬಜೆಟ್‌ನಲ್ಲಿ ಕೊರತೆ ಎಂದ ಕೂಡಲೆ ಮನೆಯ ಬಜೆಟ್‌ನಲ್ಲಿ ದೊಡ್ಡ ಕೊರತೆ ಎಂದರ್ಥ.

ರಾಜ್ಯಗಳಲ್ಲಿ ಕೊರತೆ ಬಜೆಟ್

ನಮ್ಮ ಕಥೆ ಇರಲಿ, ನಮ್ಮ ಜ್ಯೋತಿ ಬಸು, ನೃಪೇನ್‌ರವರಾಗಲಿ ಜನತಾ ಸರಕಾರದ ರಾಮಕೃಷ್ಣ ಹೆಗಡೆಯವರಾಗಲಿ ಏನು ಮಾಡುತ್ತಾರೆ? ಕೇಂದ್ರದ ಈ ತೆರಿಗೆ ಹಾಗೂ ಹಣದುಬ್ಬರ ನೀತಿಯಿಂದ ರಾಜ್ಯ ಸರ್ಕಾರ ಕೈಗೊಳ್ಳಬೇಕಾದ ಎಲ್ಲಾ ಯೋಜನೆಗಳ ವೆಚ್ಚವೂ ತಾನೇ ತಾನಾಗಿ ಏರುತ್ತದೆ ಹೀಗಾಗಿ ರಾಜ್ಯದ ಜನರಿಗೆ ಶಾಲೆ, ಆಸ್ಪತ್ರೆ, ರಸ್ತೆ ಇತ್ಯಾದಿಗಳ ಸೌಲಭ್ಯ ಒದಗಿಸಬೇಕಾದ ರಾಜ್ಯ ಸರ್ಕಾರಗಳೂ ಸಾಮಾನ್ಯ ಜನದ ಮೇಲೆ ಮತ್ತಷ್ಟು ತೆರಿಗೆ ಹಾಕಬೇಕು ಇಲ್ಲವೇ ಕೊರತೆ ಬಜೆಟ್ ಮಂಡಿಸಬೇಕು.

ಓವರ್‌ಡ್ರಾಫ್ಟ್ ಎಂದರೆನು?

ರಾಜ್ಯಗಳಿಗೆ ತೆರಿಗೆ ಹಾಕಲು ಇರುವ ಅಧಿಕಾರವೇ ಸೀಮಿತ. ಕೇಂದ್ರದಂತೆಯೇ ರಾಜ್ಯಗಳು ಕೊರತೆ ಬಜೆಟ್ ಮಂಡಿಸಬಹುದು. ಮಂಡಿಸುತ್ತಲೂ ಇವೆ. ಆದರೆ ರಾಜ್ಯಗಳು ಕೊರತೆ ಬಜೆಟ್ ಮಂಡಿಸಿದರೆ ಅವರು ರಿಸರ್ವ್ ಬ್ಯಾಂಕಿನಿಂದ ಹಣ ಪಡೆಯಬಹುದೇ? -ಕೇಂದ್ರ ಸರ್ಕಾರ ಕೊರತೆ ಬಜೆಟ್ ಮಂಡಿಸಿದಾಗ ಮಾಡುವಂತೆ. 85-86 ರವರೆಗೂ, ಆಗಾಗ ಕೇಂದ್ರ ಸರ್ಕಾರ ಕಿರಿ ಕಿರಿ ಮಾಡಿದರೂ ರಾಜ್ಯ ಸರ್ಕಾರಗಳು ಕೊರತೆ ಬಜೆಟ್ ಮಂಡಿಸಿದಾಗೆಲ್ಲಾ ರಿಸರ್ವ್ ಬ್ಯಾಂಕ್‌ನಿಂದ ತಾವು ತಾವು ಆ ಬ್ಯಾಂಕ್‌ನಲ್ಲಿಟ್ಟ ಹಣಕ್ಕಿಂತ ಹೆಚ್ಚು ಹಣವನ್ನು ತಮ್ಮ ಬಜೆಟ್‌ನ ಕೊರತೆ ಎಷ್ಟಿದೆಯೊ ಅಷ್ಟು ಹೆಚ್ಚು ಹಣವನ್ನು ಪಡೆಯುತ್ತಿದ್ದವು. ಇದಕ್ಕೆ ಓವರ್ ಡ್ರಾಫ್ಟ್ ಸೌಲಭ್ಯವೆಂದು ಕರೆಯುತ್ತಿದರು. 85-86 ರಲ್ಲಿ ರಾಜೀವ್ ಗಾಂಧಿಯವರು ಇದ್ದಕ್ಕಿದ್ದಂತೆ ಫರ್ಮಾನ್ ಹೊರಡಿಸಿ ರಾಜ್ಯ

[8ನೇ ಪುಟ ನೋಡಿ]

ಬಜೆಟ್‌ಗಳನ್ನು ಅರ್ಥ ಮಾಡಿಕೊಳ್ಳುವುದು ಹೇಗೆ

ಬಜೆಟ್ ಅನ್ನು ಏಕೆ ಅರ್ಥ ಮಾಡಿಕೊಳ್ಳಬೇಕು ?

ಸಾಮಾನ್ಯವಾಗಿ ಬಜೆಟ್ ಎಂದರೆ ಸಾಕು ನಮ್ಮ ಜನರೆಲ್ಲರಿಗೆ ತೆರಿಗೆಗಳ ಹೇರಿಕೆ ಎಂದೇ ಅರ್ಥ ಕೆಲವು ಮಧ್ಯಮ ವರ್ಗದ ನೌಕರರಿಗೆ ತಮ್ಮ ಆದಾಯ ತೆರಿಗೆಯ ಇಳಿಕೆಯ ಬಗ್ಗೆ ಸಂಬಳದ ಶ್ರೇಣಿಯ ಬಗ್ಗೆ ಏನು ಹೇಳಿದೆಯೋ ಎಂಬ ಆಸಕ್ತಿ ಮಾತ್ರ ಇರಬಹುದು. ಇನ್ನುಳಿದ ಅನೇಕ ಅಂಶಗಳ ಕಡೆಗೆ ಮುಖ ಕೂಡ ತಿರುಗಿಸುವುದಿಲ್ಲ. ಅದರಲ್ಲಿ ಬರುವ ಅಸಂಖ್ಯ ಅಂಕಿ ಅಂಶಗಳ ಗುದ್ದಾಟ, ಅನೇಕ ಅರ್ಥವಾಗದ ಪದಗಳು ಇವು ನಮ್ಮ ಜನಸಾಮಾನ್ಯರು ಬಜೆಟ್ ಎಂದರೆ ಸಾಕು ಮುಖ ಬೇರೆಡೆಗೆ ತಿರುಗಿಸಲು ಕಾರಣವಾಗಿದೆ

ಆದರೆ ಕಾರ್ಮಿಕ ವರ್ಗವನ್ನು, ದುಡಿಯುವ ಜನತೆಯನ್ನು ಹತ್ತಿಕ್ಕಲು ಬಜೆಟ್ ಹಾಗೂ ಅದರ ಹಿಂದಿನ ನೀತಿ ನಿರೂಪಣೆ ನಮ್ಮ ಆಳುವ ವರ್ಗಕ್ಕೆ ಪೋಲೀಸು, ನ್ಯಾಯಾಲಯಗಳಂತಹವೇ ಒಂದು ಪ್ರಮುಖ ಸಾಧನವಾದ್ದರಿಂದ ಕಾರ್ಮಿಕ ವರ್ಗ ಅದರ ಬಗ್ಗೆ ನಿರಾಸಕ್ತವಾಗಿರುವುದು ಸಾಧ್ಯವಿಲ್ಲ.

ಬಜೆಟ್ ಬಗ್ಗೆ ನಮಗೆ ಆಸಕ್ತಿ ಇದೆ ನಮ್ಮ ಹಿತದ ರಕ್ಷಣೆಯ ಪ್ರಶ್ನೆಗಳು ಜೀವನದ ರಕ್ಷಣೆಯ ಪ್ರಶ್ನೆಗಳು ಅದರಲ್ಲಿ ಅಡಗಿವೆ ಎಂದು ರಾಜೀವ್‌ಗಾಂಧಿಯವರು ಬೆಚ್ಚುವಂತೆ, ಬೆದರುವಂತೆ ಸಾರ್ವತ್ರಿಕ ಮುಷ್ಕರ ಹಾಗೂ ಬಂದ್ ಮೂಲಕ (21.1.86) ಕಾರ್ಮಿಕ ವರ್ಗ ಒಮ್ಮೆ ತೋರಿಸಿದೆ. ಮತ್ತೆ ಮತ್ತೆ ತೋರಿಸುವುದಕ್ಕೆ ಹಿಂಜರಿಯಲಾರದು

ಬಜೆಟ್‌ನಲ್ಲಿ ಸಾಮಾನ್ಯವಾಗಿ ಜನಸಾಮಾನ್ಯರ ತಲೆ ತಿನ್ನುವ ಕೆಲವು ಪದಗಳಿಗೆ ಸರಳ ವಿವರಣೆ ನೀಡುವ ಮೂಲಕ ಬಜೆಟ್ ಅನ್ನು ಹೆಚ್ಚು ಅರ್ಥ ಮಾಡಿಕೊಳ್ಳಲು, ಆ ಬಗ್ಗೆ ಹೆಚ್ಚು ಆಸಕ್ತಿವಹಿಸಲು ಸಹಾಯ ಮಾಡುವ ಒಂದು ಸಣ್ಣ ಪ್ರಯತ್ನ ಇದು.

ಬಜೆಟ್ ಎಂದರೇನು ?

ಬಜೆಟ್ ಎಂದರೇನು ಎಂಬುದಕ್ಕೆ ಒಂದು ಸರಳ ಅರ್ಥ, ಪತ್ರಿಕೆಗಳನ್ನು ಓದುವ ಜನಕ್ಕೆ ತಿಳಿದಿರುತ್ತದೆ. ನನ್ನ ಕುಟುಂಬದ ಬಜೆಟ್ ಎಂಬ ಅರ್ಥದಲ್ಲಿ ಬಳಸುತ್ತಿರುತ್ತಾರೆ. ಸರಕಾರದ ಬಜೆಟ್ ಅಂದರೆ ಸರ್ಕಾರಕ್ಕೆ ಮುಂದಿನ ವರ್ಷದಲ್ಲಿ ಬರಬಹುದಾದ ಆದಾಯ, ಸರ್ಕಾರಕ್ಕೆ ಈಗಾಗಲೇ ಇರುವ ವೆಚ್ಚದ ಜೊತೆಗೆ ಮುಂದಿನ ವರ್ಷದಲ್ಲಿ ತೆಗೆದುಕೊಳ್ಳಬಹುದಾದ ಯೋಜನೆಗಳ ವೆಚ್ಚ, ಈ ವೆಚ್ಚವನ್ನು ಸರಿತೂಗಿಸುವ ಆದಾಯ ಪಡೆಯುವುದಕ್ಕಾಗಿ ಹೆಚ್ಚಿನ ತೆರಿಗೆಗಳು (ಯಾರ ಮೇಲೆ ಎಷ್ಟು ಎನ್ನುವುದು ಆಯಾ ಸರ್ಕಾರದ ನೀತಿಯನ್ನು ಅವಲಂಬಿಸಿರುತ್ತದೆ) ಕೆಲವರಿಗೆ ಹಿಂದಿನಿಂದ ನೀಡುತ್ತಿದ್ದ ಸಹಾಯಧನ ಮತ್ತೆ ಕೆಲವು ವಿಭಾಗಗಳಿಗೆ ಹೆಚ್ಚು ರಿಯಾಯಿತಿಗಳು ಇವೆಲ್ಲ ಸೇರಿಯೂ ಕೂಡ ವೆಚ್ಚಕ್ಕೂ ಆದಾಯಕ್ಕೂ ಸರಿದೂಗುವುದಿಲ್ಲ. ಆಗ ನಮ್ಮ ದೇಶದಲ್ಲಿಯೇ ಸಾಲ ಎತ್ತುವುದು ವಿದೇಶದಿಂದ ಸಾಲ ಪಡೆಯುವುದು ಮಾತ್ರವಲ್ಲ ಕೊನೆಗೆ "ಕೊರತೆ" ಯನ್ನು ಸೂಚಿಸುವುದು

[ಬಜೆಟ್ ಬಗ್ಗೆ ಮಾರ್ಕ್ಸ್‌ರವರ ವಿವರಣೆ ಬಾಕ್ಸ್ ನೋಡಿ]

ಪ್ರತ್ಯಕ್ಷ ತೆರಿಗೆಗಳು-ಅಪ್ರತ್ಯಕ್ಷತೆರಿಗೆಗಳು

ಪ್ರತ್ಯಕ್ಷ ತೆರಿಗೆಗಳೆಂದರೆ ನೇರವಾಗಿ ಒಬ್ಬ ವ್ಯಕ್ತಿಯಿಂದ ಇಷ್ಟು ತೆರಿಗೆ ಬರಬೇಕು ಎಂದು ನಿರ್ದಿಷ್ಟಪಡಿಸಿ ವಸೂಲು ಮಾಡುವುದು. ಸಾಮಾನ್ಯವಾಗಿ ಶ್ರೀಮಂತರ ಮೇಲೆ ಹಾಕುವಂತಹ ತೆರಿಗೆಗಳಾದ ಆದಾಯ ತೆರಿಗೆ, ಸಂಪತ್ ತೆರಿಗೆ ಆಸ್ತಿ ತೆರಿಗೆ, ಕೊಡುಗೆಗಳ ಮೇಲೆ ಹಾಕುವ ತೆರಿಗೆ (ಗಿಫ್ಟ್ ಟಾಕ್ಸ್]. ಶ್ರೀಮಂತರ ಮೇಲೆ ಹಾಕುವ ತೆರಿಗೆಗಳ ಪ್ರಮಾಣ ಬಹಳ ಕಡಿಮೆಯಾಗುತ್ತಿದೆ. ರಾಜೀವ್‌ಗಾಂಧಿಯವರಂತೂ ಬಹಳ ಉದಾರವಾಗಿ ಈ ತೆರಿಗೆಗಳಿಗೆ ರಿಯಾಯಿತಿ ತೋರಿಸುತ್ತಿದ್ದಾರೆ. ಆದ್ದರಿಂದ ಈ ಎರಡು ವರ್ಷಗಳಲ್ಲಿ ಇನ್ನಷ್ಟು ಕಡಿಮೆಯಾಗಿವೆ. ಭೂಮಾಲಿಕರಿಗೆ ಹೆದರಿ ಕೃಷಿ ವರಮಾನ ತೆರಿಗೆಯನ್ನು ಹಾಕಿಯೇ ಇಲ್ಲ[ಹಿಂದಿನ 'ಐಕ್ಯರಂಗ' ಸಂಚಿಕೆಯಲ್ಲಿ ಆರ್ ಚಂದ್ರರ ಲೇಖನ ಓದಿ]

ಅಪ್ರತ್ಯಕ್ಷ ತೆರಿಗೆಗಳು : ಅಪ್ರತ್ಯಕ್ಷ ತೆರಿಗೆಗಳೆಂದರೆ ನಮಗೇ ಗೊತ್ತಿಲ್ಲದಂತೆ ನಮ್ಮ ಕಿಸೆಗೆ ಹಾಕುವುದು, ಕಿಸೆ ಕತ್ತರಿಸುವುದು ಎಂಬ ಒಂದು ನಾಣ್ನುಡಿ ಇದೆ. ಜನಸಾಮಾನ್ಯರಮೇಲೆ ನಡುಮುರಿಯುವಷ್ಟು ಭಾರ ಹೇರುವುದು ಇದೇ. ಇದರಲ್ಲಿ ಕೇಂದ್ರ ಸರ್ಕಾರ ಹೇರುವ ಎಕ್ಸೈಸ್ ಸುಂಕಗಳು ಕಸ್ಟಂಸ್ (ದೇಶ ಆಮದು ಮಾಡಿಕೊಳ್ಳುವ ವಸ್ತುವಿನ ಮೇಲೆ ಹಾಕುವ ಸುಂಕ) ತೆರಿಗೆ, ರಾಜ್ಯಗಳು ಹಾಕುವ ಮಾರಾಟ ತೆರಿಗೆ, ಮನರಂಜನಾ ತೆರಿಗೆ ಇನ್ನೂ ಅಸಂಖ್ಯಾತ ತೆರಿಗೆಗಳು ಸೇರುತ್ತವೆ. ನಾವು ಕೊಳ್ಳುವ ವಸ್ತುವಿನ ಬೆಲೆಯ ಭಾಗವಾಗಿ ಹೋಗಿರುವ ಈ ತೆರಿಗೆಗಳ ಪ್ರಮಾಣ ಎಷ್ಟು ಎಂಬುದೇ ನಮಗೆ ಗೊತ್ತಾಗುವುದಿಲ್ಲ. ರಾಜ್ಯದಿಂದ ರಾಜ್ಯಗಳಿಗೆ ವಸ್ತುಗಳು ಸಾಗಣೆಯಾಗುವಾಗ, ಸಗಟು ವ್ಯಾಪಾರದವರಿಂದ ನಿಮ್ಮ ಮನೆಯ ಹತ್ತಿರದ ಕಿರಾಣಿ ಅಂಗಡಿಯವರೆಗೂ ಈ ತೆರಿಗೆಗಳು ಅನೇಕ ಹಂತಗಳಲ್ಲಿ ಒಂದರ ಮೇಲೊಂದು ಹೇರಲ್ಪಟ್ಟು ಕೆಲವು ವಸ್ತುಗಳಲ್ಲಿ ಬೆಲೆಯ ಮುಕ್ಕಾಲುಭಾಗಕ್ಕಿಂತಲೂ ಹೆಚ್ಚು ಆಗಿರುತ್ತದೆ. ಇದು ಜನಕ್ಕೆ ಚೆನ್ನಾಗಿ ಅನುಭವವಾಗುವುದು ತೆರಿಗೆ ವಿನಾಯತಿ ಪಡೆದ ಚಲನ ಚಿತ್ರದ ಟಿಕೆಟ್ ಕೊಂಡಾಗ.

ತೆರಿಗೆ ಆದಾಯ_ತೆರಿಗೇತರ ಆದಾಯ

ತೆರಿಗೆ ಆದಾಯ, ಕೇಂದ್ರ ಸರ್ಕಾರದ ಆದಾಯದಲ್ಲಿ ಶೇಕಡ 50 ಭಾಗದಷ್ಟು ಆದಾಯವಾಗಿದೆ. ಮೇಲೆ ಹೇಳಿದ ಪ್ರತ್ಯಕ್ಷ ಅಪ್ರತ್ಯಕ್ಷ ತೆರಿಗೆಗಳು ಇದರಲ್ಲಿ ಸೇರಿವೆ.

ತೆರಿಗೇತರ ಆದಾಯವೆಂದರೆ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಗಳಿಗೆ, ವಿವಿಧ ಸರ್ಕಾರೀ ಅರೆ ಸರ್ಕಾರೀ ಸಂಸ್ಥೆಗಳಿಗೆ ನೀಡಿದ ಸಾಲಗಳಿಂದ ಬಂದ ಬಡ್ಡಿ, ಕೇಂದ್ರ ಸರ್ಕಾರದ ಹತೋಟಿಯಲ್ಲಿರುವ ಉದ್ಯಮಗಳಿಂದ ಬಂದ ಲಾಭಾಂಶಗಳು, ಡಿವಿಡೆಂಡ್‌ಗಳು ಇತ್ಯಾದಿ.

ಯೋಜನೆ- ಯೋಜನೇತರ ವೆಚ್ಚಗಳು

ಯೋಜನೆಯೆಂದರೆ [ಕೇಂದ್ರಸರ್ಕಾರದ ತೀರ್ಮಾನದಂತೆ] ಪಂಚವಾರ್ಷಿಕ ಯೋಜನೆಗಳಲ್ಲಿ ಒಳಪಟ್ಟಿರುವ ಆ ವರ್ಷದಲ್ಲಿ ಆರಂಭವಾಗುವ, ಹಿಂದಿನ ಕೆಲವು ವರ್ಷಗಳಲ್ಲಿ ಆರಂಭವಾಗಿರುವ ಹೊಸ ಯೋಜನೆಗಳ ವೆಚ್ಚಗಳು.

ಯೋಜನೇತರ ವೆಚ್ಚಗಳು; ಎಂದರೆ ಪಂಚವಾರ್ಷಿಕ ಯೋಜನೆಗಳಲ್ಲಿ ಸೇರದಿರುವ ಎಲ್ಲಾ ಸರ್ಕಾರೀ ವೆಚ್ಚಗಳು ಇದರಲ್ಲಿ ಸರ್ಕಾರೀ ನೌಕರರಿಗೆ ಸಿಗುವ ಸಂಬಳ, ಭತ್ಯೆಗಳು, ವಾಹನ ಸೌಕರ್ಯಗಳಿಗಾಗಿ ಕಛೇರಿ ವೆಚ್ಚಗಳಿಗಾಗಿ ಮಾಡುವ ಖರ್ಚು ಸೇರುತ್ತದೆ. ನಮ್ಮ ದೇಶದ ಬಂಡವಾಳಶಾಹಿ ಯೋಜನೆಯ ವೈಪರೀತ್ಯವೆಂದರೆ ಶಾಲೆಯನ್ನು ಕಟ್ಟುವುದು ಪೀಠೋಪಕರಣವನ್ನೂ ಕೊಳ್ಳುವುದುಯೋಜನೆಯಂತೆ ಆದರೆ ಅಲ್ಲಿ ಖಾಲಿ ಬಿದ್ದ ಶಿಕ್ಷಕರ ಜಾಗಗಳನ್ನು ಭರ್ತಿಮಾಡುವುದು ಅವರ ಸಂಬಳ ಸಾರಿಗೆಗಳನ್ನು ಉತ್ತಮ ಪಡಿಸುವುದು ಯೋಜನೇತರ. ಇದನ್ನೇ ರಾಜೀವ್‌ಗಾಂಧಿಯವರು ಪಶ್ಚಿಮ ಬಂಗಾಳದ ಸರ್ಕಾರ ಯೋಜನೇತರ ವೆಚ್ಚಗಳನ್ನೇ ಹೆಚ್ಚಾಗಿ ಮಾಡುತ್ತಿದೆ ಎಂದು ಅಪಪ್ರಚಾರ ಮಾಡುವುದು.

ರಾಜ್ಯಸರ್ಕಾರಗಳು ಕೈಗೊಳ್ಳುವ ಯೋಜನೆಗಳು ಯೋಜನೆಗಳಲ್ಲ. ಕೇಂದ್ರ ಸರ್ಕಾರ ಒಪ್ಪಿದ ಯೋಜನೆಗಳು ಮಾತ್ರ ಯೋಜನೆಗಳು. ಹೀಗಾಗಿ ಕರ್ನಾಟಕದಲ್ಲಿಯೇ ಕಾವೇರಿ ನದಿಯಯೋಜನೆಗಳು ಇನ್ನೂ ಯೋಜನೆಗಳಲ್ಲಿ ಸೇರಿಲ್ಲ.

ಸಬ್ಸಿಡಿಗಳು ಅಥವಾ ಸಹಾಯ ಧನಗಳು

ಈಗ ಈ ಮಾತು ಬಹಳ ಹೆಚ್ಚಾಗಿ ಕೇಳಿಬರುತ್ತಿದೆ. ಇದೊಂದು ದೊಡ್ಡ ಯೋಜನೇತರ ವೆಚ್ಚ, ಇದನ್ನು ಕಡಿಮೆ ಮಾಡಬೇಕು ಎಂಬುದು ರಾಜೀವ್ ಗಾಂಧಿಯವರ ಘೋಷಣೆ. ಅಪರಿಮಿತವಾಗಿ ಅಪ್ರತ್ಯಕ್ಷ ತೆರಿಗೆಗಳನ್ನು ಜನರ ಮೇಲೆ ಹೇರಿರುವುದರ, ಬೆಲೆ ಏರಿರುವುದರ ಪರಿಣಾಮವಾಗಿ ಜನರ ಕೊಳ್ಳುವ ಶಕ್ತಿ ಕುಸಿದು ದುಡಿಯುವ ಜನ ಆಹಾರ ಧಾನ್ಯಗಳನ್ನು ಕೊಳ್ಳುವ, ರೈತರು ರಸಗೊಬ್ಬರ ಕೊಳ್ಳುವ ಶಕ್ತಿ ಹೋಗಿವೆ. ಇದನ್ನು ಅಲ್ಪಮಟ್ಟಿಗೆ ಸರಿಪಡಿಸುವ ಒಂದು ಕೆಲಸ ಈ ಸಬ್ಸಿಡಿಗಳು ಆಹಾರಕ್ಕಾಗಿ ಸಬ್ಸಿಡಿ ಸುಮಾರು 1750 ಕೋಟಿ ರೂಗಳು. ರಸಗೊಬ್ಬರಕ್ಕಾಗಿ 19 0 ಕೋಟಿ ರೂಗಳ ಇದರ ಜೊತೆಗೆ ಕೈಗಾರಿಕಾ ಮಾಲೀಕರು ಹೊರ ದೇಶಕ್ಕೆ ರಫ್ತು ಮಾಡುವುದಕ್ಕಾಗಿ ನೀಡುತ್ತಿರುವ ಸಬ್ಸಿಡಿ 550 ಕೋಟಿ ರೂಗಳು ಇದನ್ನು ಮಾತ್ರ ಹೆಚ್ಚಿಸುವುದಕ್ಕೆ ರಾಜೀವ್ ಸರ್ಕಾರ ಉತ್ಸಾಹದಿಂದಿದೆ. ಆದುದರಿಂದ ಇಟ್ಟಿದ್ದ 550 ಕೋಟಿ ರೂಗಳ ಹಣ ಈಗಾಗಲೆ 700 ಕೋಟಿ ರೂಗಳಿಗೇರಿದೆ.

ಕೇಂದ್ರದ ಬಜೆಟ್-ರಾಜ್ಯದ ಬಜೆಟ್‌ಗಳು

ಪ್ರಜಾಪ್ರಭುತ್ವದಲ್ಲಿ ಯಾವುದೇ ರಾಜ್ಯ ಸರ್ಕಾರ ಚುನಾಯಿತವಾದ ವಿಧಾನ ಮಂಡಲದ ಎರಡು ಸದನಗಳಿಂದ ಅಥವಾ ಕೇಂದ್ರ ಸರ್ಕಾರ ಸಂಸತ್ತಿನಿಂದ ಅನುಮತಿ ಪಡೆಯದೆ ಯಾವುದೇ ವೆಚ್ಚವನ್ನು ಮಾಡುವಂತಿಲ್ಲ

ಬಜೆಟ್ ಬಗ್ಗೆ ಚರ್ಚೆ

ಈ ಬಜೆಟ್ ಅನ್ನು ಮಂಡಿಸುವಾಗಲೇ ಅರ್ಥಸಚಿವರು ಸರ್ಕಾರದ ನೀತಿ ನಿರೂಪಣೆಯನ್ನು ಆ ಮೂಲಕ ಘೋಷಿಸುತ್ತಾರೆ. ಜೊತೆಗೆ ಹಿಂದಿನ ವರ್ಷ ಸರ್ಕಾರ ಏನು ಮಾಡಿದೆ ಎಂಬುದರ ಬಗ್ಗೆ ಒಂದು ಆರ್ಥಿಕ ಸಮೀಕ್ಷೆ ನೀಡುತ್ತಾರೆ.

ಸರ್ಕಾರವನ್ನು ನಡೆಸುತ್ತಿರುವ ಯಾವುದೇ ಆಳುವ ಪಕ್ಷ ಜನತೆಯ ಮುಂದೆ ಪ್ರಣಾಳಿಕೆಯನ್ನಿಟ್ಟು ಪ್ರಣಾಳಿಕೆಯಲ್ಲಿ ಒಳಗೊಂಡ ಎಲ್ಲಾ ಕೆಲಸ ಮಾಡುತ್ತೇನೆಂದು ಆಶ್ವಾಸನೆ ನೀಡಿ ಆರಿಸಿ ಬಂದಿರುತ್ತದೆ. ಈ ಆಶ್ವಾಸನೆಗಳನ್ನು ಜಾರಿಮಾಡುವ ಬಹುಮುಖ್ಯ ಸಾಧನ "ಬಜೆಟ್" ಆದ್ದರಿಂದಲೇ ದುಡಿಯುವ ಜನ ಯಾವುದೇ ಪಕ್ಷಕ್ಕೆ ಮತ ನೀಡಿ ಸುಮ್ಮನಿರುವುದಲ್ಲ. ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿದ ವಾಗ್ದಾನಗಳು ಬಜೆಟ್‌ನ ಮೂಲಕ ಕಾರ್ಯಗತವಾಯಿತೇ ಎಂದು ಅನುದಿನವೂ ಸರ್ಕಾರವನ್ನು ಪರೀಕ್ಷೆಗೊಳಪಡಿಸಬೇಕು. ಪ್ರಣಾಳಿಕೆಯಲ್ಲಿಲ್ಲದ ರಿಯಾಯಿತಿಗಳನ್ನು ಶ್ರೀಮಂತರಿಗೆ ನೀಡಿದುದನ್ನು ತಪ್ಪಿಸಬೇಕು. ಅದರ ಮೇಲೆಯೇ ಸರ್ಕಾರದ ಬಗ್ಗೆ ತಮ್ಮ ತೀರ್ಮಾನ ರೂಪಿಸಬೇಕು. ಹಾಗೂ ಜನರಿಂದ ಆಯ್ಕೆಯಾದವರನ್ನು ಪ್ರಶ್ನಿಸಬೇಕು.

ಇಲಾಖೆಗಳ ಬಗ್ಗೆ ಚರ್ಚೆ

ಬಜೆಟ್‌ನ ಒಟ್ಟು ದೃಷ್ಟಿಕೋನದ ಬಗ್ಗೆ ಚರ್ಚೆಯಾದ ನಂತರ ಸರ್ಕಾರದ ವಿವಿಧ ಇಲಾಖೆಗಳಿಗಾಗಿ ನೀಡಿರುವ ಹಣದ ಬಗ್ಗೆ ಚರ್ಚೆಯಾಗುತ್ತದೆ. ಆಗ ಆಯಾ ಇಲಾಖೆಗಳು ಹಿಂದಿನ ವರ್ಷ ಏನು ಸಾಧಿಸಿವೆ. ಅದರಲ್ಲಿನ ದುಡಿಯುವ ಜನವಿರೋಧಿ ನೀತಿಗಳು ಪಕ್ಷಪಾತ, ಭ್ರಷ್ಟಾಚಾರಗಳ ಬಗ್ಗೆ ಚರ್ಚೆಯಾಗುತ್ತದೆ. ಇದೆಲ್ಲಾ ನಡೆದ ನಂತರವೇ ಬಜೆಟ್‌ಗೆ ಸಂಸತ್ತು ಅಂಗೀಕಾರ ನೀಡುವುದು.

ಇಡೀ ದೇಶದಲ್ಲಿ, ಇಡೀ ರಾಜ್ಯದಲ್ಲಿ ವಿವಿಧ ಸರ್ಕಾರಿ ಇಲಾಖೆಗಳು ನಡೆಸಿರುವ ಜನವಿರೋಧಿ ಕ್ರಮಗಳ ಬಗ್ಗೆ ನಮ್ಮ ಶಾಸಕರು, ಎಂ ಪಿ ಗಳಿಗೆ ತಿಳಿಸಿದರೆ ಅವರು ಅದನ್ನು ಒಂದೊಂದನ್ನಾಗಿ ಎತ್ತಿ ತೋರಿಸಿ ದುಡಿಯುವ ಜನವರ್ಗದ ವಾಣಿ ಸಂಸತ್ತಿನಲ್ಲಿ ವಿಧಾನ ಸಭೆಗಳಲ್ಲಿ ಧೃಡವಾಗಿ, ಗಟ್ಟಿಯಾಗಿ ಮೂಡಿಬರಲು ಸಾಧ್ಯ. ಅದರ ಜೊತೆಗೆ ಪಕ್ಷ, ಸಂಸತ್ತಿನ ಹೊರಗೆ ಮಾಡುವ ಹೋರಾಟವೂ ಗಟ್ಟಿಯಾಗಬೇಕು. ಅದನ್ನು ಸಾಧ್ಯವಾಗಿಸುವುದು ಪಕ್ಷದ ಎಲ್ಲಾ ಘಟಕಗಳ, ನಮ್ಮ ನಿಮ್ಮೆಲ್ಲರ ಹೊಣೆ.

ಬಜೆಟ್ ಬಗ್ಗೆ ನಮಗೆ ಆಸಕ್ತಿಯಿದೆ ನಮ್ಮ ಹಿತದ ರಕ್ಷಣೆಯ ಜೀವನದ ರಕ್ಷಣೆಯ ಪ್ರಶ್ನೆಗಳು ಅದರಲ್ಲಿ ಅಡಗಿದೆ ಎಂದು ರಾಜೀವ್‌ಗಾಂಧಿಯವರು ಬೆಚ್ಚುವಂತೆ, ಬೆದರುವಂತೆ ಸಾರ್ವತ್ರಿಕ ಮುಷ್ಕರ ಹಾಗೂ ಬಂದ್ ಮೂಲಕ (21.1.86) ಕಾರ್ಮಿಕ ವರ್ಗ ಒಮ್ಮೆ ತೋರಿಸಿದೆ. ಮತ್ತೆ ಮತ್ತೆ ತೋರಿಸುವುದಕ್ಕೆ ಹಿಂಜರಿಯಲಾರದು.

ರೀಗನ್‌ನ ಅರ್ಥ ಶಸ್ತ್ರ ಮತ್ತು ರಾಜೀವ್ ಗಾಂಧಿ

ಇತ್ತೀಚೆಗೆ ನವದೆಹಲಿಯಲ್ಲಿ ಅಂತರರಾಷ್ಟ್ರೀಯ ವಾಣಿಜ್ಯ ಮಂಡಳಿಯ ಮುಂದೆ ಆಡಿದ ಮಾತುಗಳು ಪ್ರಧಾನಿಯವರು ಸ್ವತಃ ತಾವೇ ಘೋಷಿಸಿಕೊಂಡ ರೀಗನ್ ಮಾದರಿ ಅರ್ಥಶಾಸ್ತ್ರವಾದಿ ಎಂಬುದನ್ನು ಸಾಬೀತು ಪಡಿಸಿವೆ.

"ನಮ್ಮ ದೇಶದ ಬಂಡವಾಳಗಾರರಿಗೆ ಬಂಡವಾಳದ ಮಾರುಕಟ್ಟೆಗೆ ಸರ್ವ ಅನುಕೂಲವನ್ನು ಕಲ್ಪಿಸುವಂತೆ ತೆರಿಗೆಗಳ ರಚನೆಯನ್ನು ಪುನರ್ರಚಿಸುವುದೇ ತಮ್ಮ ಗುರಿಯೆಂದು ಹೇಳಿದ್ದಾರೆ.

ರೀಗನ್ ಇಂದು ಮಾಡುತ್ತಿರುವುದೇನು ?

ಊಹಿಸಲಾರದಷ್ಟು ಹೆಚ್ಚಿನ ಕೊರತೆ ಬಜೆಟ್, ಶ್ರೀಮಂತರಿಗೆ ತೆರಿಗೆಗಳ ವಿನಾಯತಿ, ಆರ್ಥಿಕದ ಖಾಸಗೀಕರಣ, ಜನಕಲ್ಯಾಣದ ಯೋಜನೆಗಳಲ್ಲಿ ಕಡಿತ. ರಾಜೀವ್‌ಗಾಂಧಿಯವರು ಅದೇ ಹಾದಿಯಲ್ಲಿ ಕಣ್ ಮುಚ್ಚಿ ಸಾಗಿದ್ದಾರೆ. ಗಂಡಾಂತರ ಕಾದಿದೆ - ದೇಶಕ್ಕೆ ವೇತನ ಪಡೆವ ಜನಕ್ಕೆ.

— ಕಾರ್ತಿಕ್ ಟೈ

ಫಿಲಿಪ್ಪೈನ್ಸ್ : ಐದನೇ ಒಂದು ಭಾಗದಲ್ಲಿ ಕ್ರಾಂತಿಕಾರಿ ಆಳ್ವಿಕೆ

(3ನೇ ಪುಟದಿಂದ)

ಎನ್.ಡಿ.ಎಫ್.ಹಾಗೂ ಅಕ್ವಿನೋ ಸರ್ಕಾರದ ನಡುವಿನ ಮಾತುಕತೆಗಳಿಂದಾಗಿ ಅಂತಿಮವಾಗಿ ಜನತಾ ಕ್ರಾಂತಿಕಾರೀ ಸರ್ಕಾರಕ್ಕೆ ಮಾನ್ಯತೆ ಕೊಟ್ಟಂತಾಗಬಹುದೆಂದು ಹೆದರಿದ ಫಿಲಿಪ್ಪೈನ್ಸ್‌ನ ಸೇನೆ ಕದನ ವಿರಾಮವನ್ನು ಹಲವು ಬಾರಿ ಮುರಿದರು. ಆದರೂ ವಿಚಲಿತರಾಗದೆ ಕದನ ವಿರಾಮವನ್ನು ಜನತಾ ಸೇನೆ ಪಾಲಿಸಿಕೊಂಡು ಬಂತು. ಆದರೆ ಈ ಮಾತುಕತೆಗಳನ್ನು ಬುಡಮೇಲು ಮಾಡಲು ಫಿಲಿಪ್ಪೈನ್ಸ್‌ನ ಬಲಪಂಥೀಯ ಸೇನಾಪಡೆ ದೃಢ ನಿರ್ಧಾರ ಮಾಡಿತ್ತು ಎಂಬುದು ಜನವರಿ22ರ ಘಟನೆಯಿಂದ ಸ್ಪಷ್ಟವಾಯಿತು.ಅಂದು ಭೂಸುಧಾರಣೆ ಹಾಗೂ ಒಕ್ಕಲೆಬ್ಬಿಸುವುದನ್ನು ಕಡೆಗೆ ಒತ್ತಾಯಿಸಿ ಪೀಪಲ್ಸ್ ಪಾರ್ಟಿ ನೇತೃತ್ವದ ಫಿಲಿಪ್ಪೈನೋ ರೈತರ ಸಂಘದ ಕರೆಯ ಮೇರೆಗೆ ರಾಜಧಾನಿ ಮನಿಲಾದಲ್ಲಿ ಅಧ್ಯಕ್ಷೀಯ ಮಹಲಿನ ತಮ್ಮ ಮೆರವಣಿಗೆ ಹೊರಟಿದ್ದ ಸಾವಿರಾರು ರೈತರ ಮೇಲೆ ವಿನಾ ಕಾರಣ ಫಿಲಿಪ್ಪೈನ್ ಸೇನಾ ತುಕಡಿಗಳು ಗೋಲೀಬಾರು ಮಾಡಿದವು 17 ರೈತರು ಕೊಲೆಯಾದರು, ನೂರು ಜನ ಗಾಯಗೊಂಡರು.

ಮಾರ್ಕೋಸ್ ಮತ್ತು ಅಕ್ವಿನೋ ಇವರಿಬ್ಬರಲ್ಲಿ ಅಕ್ವಿನೋರವರನ್ನು ಎನ್.ಡಿ.ಎಫ್. ಬಹಿರಂಗವಾಗಿ ಬೆಂಬಲಿಸಿತ್ತು. ಆದರೆ ಈ ಬೆಂಬಲದಿಂದಾಗಿ ವರ್ಗ ಹೋರಾಟವನ್ನು ಕಡೆಗಣಿಸುವುದು ಸಾಧ್ಯವಿರಲಿಲ್ಲ. ಜನವರಿ 22ರ ಘಟನೆ ಹಾಗೂ ಇದಕ್ಕೆ ಮೊದಲು ಮಾತುಕತೆಗಳಲ್ಲಿ ಭೂಸುಧಾರಣೆ, ವಿದೇಶಿ ಬಂಡವಾಳ ರಾಷ್ಟ್ರೀಕರಣ ಹಾಗೂ ಅಮೇರಿಕನ್ ನೆಲೆಗಳ ರದ್ದತಿಯ ಮುಖ್ಯ ಬೇಡಿಕೆಗಳಿಗೆ ಒಪ್ಪಲು ಅಕ್ವಿನೋ ಸರ್ಕಾರದ ನಕಾರದಿಂದಾಗಿ ಎನ್.ಡಿ.ಎಫ್. ಮಾತುಕತೆಗಳಿಂದ ಹೊರಬರಬೇಕಾಯಿತು ಫೆಬ್ರವರಿ 8 ರಂದು ಕದನ ವಿರಾಮದ ಅವಧಿ ಮುಗಿದಾಗ ತನ್ನ ಎಲ್ಲಾ ಘಟಕಗಳಿಗೆ ಸಿದ್ಧವಾಗಿರಲು ನವ ಜನತಾ ಸೇನೆ ಕರೆ ನೀಡಿದೆ.

ಶೋಷಿತ ರೈತರು ಹಾಗೂ ಫಿಲಿಪ್ಪೈನ್ಸ್ ಆಳುವ ವರ್ಗಗಳ ನಡುವಿನ ಈ ಹೋರಾಟ ಮುಂದುವರಿಯುತ್ತಿದೆ. 20% ಪ್ರದೇಶದಲ್ಲಿ ಜನತಾ ಕ್ರಾಂತಿಕಾರಿ ಸರ್ಕಾರ ಹಾಗೂ ನಗರ ಪ್ರದೇಶಗಳಲ್ಲಿ [ಲಕ್ಷ ಸದಸ್ಯತ್ವ(ಅಕ್ವಿನೋ ಸರಕಾರದ ಮೂರು ಪಟ್ಟು) ವುಳ್ಳ ಪೀಪಲ್ಸ್ ಪಾರ್ಟಿಯ ನೇತೃತ್ವದಲ್ಲಿ ಹೋರಾಟ ಮುಂದುವರಿಯುತ್ತಿರುವಂತೆ ಫಿಲಿಪ್ಪೈನ್ಸ್‌ನಲ್ಲಿ ವರ್ಗ ಹೋರಾಟ ತೀವ್ರಗೊಳ್ಳುತ್ತಿದೆ, ಅಕ್ವಿನೋ ಸರಕಾರ ತನ್ನ ವರ್ಗ ಆಳ್ವಿಕೆ ಉಳಿಸಿಕೊಳ್ಳಲು ಅಮೇರಿಕನ್ ಸರ್ಕಾರದ ಒತ್ತಡಕ್ಕೆ ಹೆಚ್ಚೆಚ್ಚು ಬಾಗಲಾರಂಭಿಸುತ್ತದೆ ಹಾಗೂ ಫಿಲಿಪ್ಪೈನ್ ಜನತೆ ತಾವು ಅಗಾಧ ಸಂಖ್ಯೆಯಲ್ಲಿ ಫೆಬ್ರವರಿ 2ರಂದು ಸಮರ್ಥಿಸಿದ ಸುಧಾರಣೆಗಳ ಜ್ಯಾರಿಗಾಗಿ ಒಗ್ಗಟ್ಟಿನಿಂದ ಹೋರಾಡಬೇಕಾಗುತ್ತದೆ. ○

ತಮಿಳುನಾಡು : ರಾಜ್ಯಾದ್ಯಂತ ರೈತರ ಹೋರಾಟ

ಫೆಬ್ರವರಿ 16 ರಂದು ತಮಿಳುನಾಡಿನಾದ್ಯಂತ ಸಾವಿರಾರು ರೈತರು ಸರ್ಕಾರೀ ಕಚೇರಿಗಳ ಎದುರು ಪ್ರತಿ ಭಟನಾ ಪ್ರದರ್ಶನಗಳನ್ನು ನಡೆಸಿದ್ದಾರೆ. ಬರಪರಿಹಾರ ಕಾಮಗಾರಿಗಳನ್ನು ಕೂಡಲೇ ಪ್ರಾರಂಭಿಸಬೇಕು ಕಬ್ಬು ಬೆಳೆಗಾರರಿಗೆ ಒಂದು ಟನ್ ಕಬ್ಬಿಗೆ 300 ರೂಪಾಯಿ ನಿಗದಿ ಪಡಿಸಬೇಕು. ಗೇಣಿದಾರರನ್ನು ಒಕ್ಕಲೆಬ್ಬಿಸುವುದನ್ನು ತಡೆಗಟ್ಟಬೇಕು. ಮುಂತಾದ ಬೇಡಿಕೆಗಳಿಗೆ ಒತ್ತಾಯಿಸಿ ಈ ಕಾರ್ಯ ಕ್ರಮವನ್ನು ನಡೆಸಲಾಗಿತ್ತು. ಪ್ರತಿಭಟನಾ ಪ್ರದರ್ಶನ ರಾಜ್ಯದ ಎಲ್ಲಾ ಭಾಗಗಳಲ್ಲೂ ಯಶಸ್ವಿಯಾಗಿ ನಡೆದಿರುವುದಾಗಿ ತಿಳಿದು ಬಂದಿದೆ.

ವಿದ್ಯುತ್ ಮಂಡಳಿ ನೌಕರರ ಹೋರಾಟ

ತಮಿಳುನಾಡಿನ ವಿದ್ಯುತ್ ಮಂಡಳಿಯಲ್ಲಿ 17 ಸಾವಿರ ಕಾರ್ಮಿಕರು ಕಂಟ್ರಾಕ್ಟ್ ಪದ್ಧತಿಯಲ್ಲಿ ಕಡಿಮೆ ಕೂಲಿಗೆ ಕೆಲಸ ಮಾಡುತ್ತಿದ್ದಾರೆ. ರಾಜ್ಯಾದ್ಯಂತ 30 ಸಾವಿರ ಸಾವಿರ ಸ್ಥಾನಗಳು ಖಾಲಿ ಬಿದ್ದಿದ್ದರೂ ಕೂಡ ಕೇವಲ 7 ಸಾವಿರ ಜನಕ್ಕೆ ಉದ್ಯೋಗ ನೀಡುವುದಾಗಿ ವಿದ್ಯುತ್ ಮಂಡಳಿ ತಿಳಿಸಿದೆ. ತಮಗೆ ನ್ಯಾಯವಾದ ವೇತನ ನೀಡಬೇಕು. ಗುರುತಿನ ಚೀಟಿ ನೀಡಬೇಕು, ವೇತನ ಸಹಿ ಹಾಕಿಸಿಕೊಳ್ಳಬೇಕೆಂದು, ಕಂಟ್ರಾಕ್ಟ ಪದ್ಧತಿಯನ್ನು ತೆಗೆದು ಹಾಕಬೇಕು ಎಂಬ ಬೇಡಿಕೆಗಳನ್ನಿಟ್ಟು ಫೆಬ್ರವರಿ 8 ರಂದು ಸಿ.ಐ.ಟಿ.ಯು. ಗೆ ಸೇರಿದ ತಮಿಳುನಾಡು ವಿದ್ಯುತ್ ಮಂಡಳಿ ನೌಕರರ ಸಂಘವು ರಾಜ್ಯಾದ್ಯಂತ ಧರಣಿ ಮುಷ್ಕರ ನಡೆಸಿತು.

ಮದ್ರಾಸ್ ನಗರದಲ್ಲಿ ನಡೆದ ಧರಣಿ ಕಾರ್ಯ ಕ್ರಮವನ್ನು ಸಿ.ಐ.ಟಿ.ಯು. ಕಾರ್ಯದರ್ಶಿ ಕಾ. ಸಿ.ಜಿ.ಕೆ. ಕೃಷ್ಣನ್ ಉದ್ಘಾಟಿಸಿ, ಭಾಗವಹಿಸಿದ್ದ ಸಾವಿರಾರು ಕಂಟ್ರಾಕ್ಟ ನೌಕರರನ್ನುದ್ದೇಶಿಸಿ ಮಾತನಾಡಿದರು.

ರಾಜ್ಯದ ದಿಂಡಿಗಲ್, ವಿರುಧನಗರ್ ರಾಮನಾಥಪುರಂ, ಶಿವಗಂಗೆ ಮುಂತಾದೆಡೆಗಳಲ್ಲಿ ಬೃಹತ್ ಪ್ರದರ್ಶನಗಳು ನಡೆದಿರುವುದಾಗಿ ತಿಳಿದು ಬಂದಿದೆ. ●

ಎಸ್. ಎಫ್. ಐ. ಅಧ್ಯಯನ ಶಿಬಿರ

ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದಲ್ಲಿ ಎಸ್. ಡಿ. ಎಂ. ಕಾಲೇಜಿನ ಆಶ್ರಯದಲ್ಲಿ ಫೆಬ್ರವರಿ 8 ರಂದು ಎಸ್. ಎಫ್. ಐ. ಅಧ್ಯಯನ ಶಿಬಿರವನ್ನು ಏರ್ಪಡಿಸಿತ್ತು.

ಶಿಕ್ಷಕರೂ, ಜನಪರ ಬರಹಗಾರರೂ ಆದ ಶ್ರೀ ಆರ್. ವಿ. ಭಂಡಾರಿ ಅವರು 'ತತ್ವಶಾಸ್ತ್ರ ಮತ್ತು ದ್ವಂದ್ವಮಾನ ಭೌತಿಕವಾದ' ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು.

ಕುಂದಾಪುರ ಭಂಡಾರ್ಕರ್ ಕಾಲೇಜಿನ ಪ್ರಾಧ್ಯಾಪಕರಾದ ಶ್ರೀ ಜಿ. ಭಾಸ್ಕರಮಯ್ಯ ಅವರು "ಧರ್ಮದ ಕುರಿತು ಮಾರ್ಕ್ಸ್‌ವಾದ ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು.

ಎಸ್. ಎಫ್. ಐ.ನ ರಾಜ್ಯ ಸಮಿತಿ ಸಹ ಕಾರ್ಯದರ್ಶಿ ಕಾ. ಕೆ. ವಿಶ್ವನಾಥ ಹೊಸ ಶಿಕ್ಷಣ ನೀತಿಯ ಬಗ್ಗೆ ವಿವರಿಸಿದರು. ಡಾ. ರಾಜೀವದೇಶಪಾಂಡೆ ಮತ್ತು ವಸಂತರೆಡ್ಡಿ ಅವರೂ ಸಹ ಮಾತನಾಡಿದರು.

ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಎಸ್. ಡಿ. ಎಂ. ಕಾಲೇಜಿನ ಪ್ರಿನ್ಸಿಪಾಲರಾದ ಡಾ.ಎನ.ಆರ್. ನಾಯಕ್ ವಹಿಸಿದ್ದರು. ಪ್ರೊ|| ಸಬಾದ ಮುಖ್ಯ ಅತಿಥಿಗಳಾಗಿದ್ದರು. ಅಶೋಕ ಭಂಡಾರಿ ಕಾರ್ಯಕ್ರಮ ನಿರ್ವಹಿಸಿದರು. ಸುರೇಶ್ ತಾಂಡೇಲ ಸ್ವಾಗತಿಸಿ, ರೇಖಾ ಹೆಗಡೆ ವಂದನಾರ್ಪಣೆ ಮಾಡಿದರು. ○

ದ. ಕ. ಜಿಲ್ಲಾ ಆಟೋರಿಕ್ಷಾ ಚಾಲಕರ ಸಮಸ್ಯೆಗಳು

ಆಟೋಚಾಲಕರ ಸಂಘವು 10 ವರ್ಷದಿಂದ ಸರ್ಕಾರದ ಮುಂದೆ ರಿಕ್ಷಾಕ್ಕೆ ನ್ಯಾಯವಾದ ಮೀಟರ್‌ದರನಿರ್ಧರಿಸಲು ರಿಕ್ಷಾ ಚಾಲಕರ ಮತ್ತು ಸಾರ್ವಜನಿಕ ಮಧ್ಯ ಸಂಪರ್ಕ ಬೆಳಿಸಿಕೊಂಡು ಬರಲು ಹಲವು ತೆರನಾದ ನಡೆಸಿ ಹೋರಾಟವ ಕೊಂಡು ಬಂದಿರುತ್ತೇವೆ. ಅನೇ ತರಹ ಕೆಲವು ಮನವಿಯನ್ನು ಸಂಬಂಧ ಪಟ್ಟವರಿಗೆ ಕೊಟ್ಟದೆ. ಹಿಂದಿನ ಅಧಿಕಾರಿಯವರು ರಾಜ್ಯದಲ್ಲಿ ಎರಡು ದರ ಮಾಡಲು ಸಾಧ್ಯವಿಲ್ಲವೆಂದು ಹೇಳಿದ ಸಮಯದಲ್ಲಿ ಮಾಜಿ ಸಾರಿಗೆ ಸಚಿವರಾದ ಎಂ. ಪಿ ಪ್ರಕಾಶ್‌ನವರು ಕಾನೂನು ತಜ್ಞರಿಗೆ ಮನವಿ ಮಾಡಿದ ಮೇಲೆ ಕಾನೂನು ತಜ್ಞರ ಅಭಿಪ್ರಾಯ ಮೇರೆಗೆ ರಾಜ್ಯದಲ್ಲಿ ಮಲೆನಾಡಿಗೆ ಪ್ರತ್ಯೇಕ ದರ ನಿಗದಿ ಆಯಿತು.

ದಿನಾಂಕ 26-3-85ರಂದು ಕರ್ನಾಟಕ ರಾಜ್ಯ ಸರ್ಕಾರವು ಬರೇ ಬೆಂಗಳೂರಿನ ರಿಕ್ಷಾ ಚಾಲಕರನ್ನು ಕರೆದು ದರ ನಿಗದಿ ಪಡಿಸಿ ಇತರ ಜಿಲ್ಲೆಯ ಚಾಲಕರಿಗೆ ಅನ್ಯಾಯ ಮಾಡಿದೆ. ಬೆಂಗಳೂರಿನಲ್ಲಿ ಇರುವ ಬಜಾಜ್ ಆಟೋರಿಕ್ಷಾಗೂ ಇಲ್ಲಿ ನಡೆಸುವ ಆಟೋರಿಕ್ಷಾಗಳಿಗೂ ಇರುವ ವ್ಯತ್ಯಾಸ ಹಲವು. ಉದಾಹರಣೆಗೆ ಬೆಂಗಳೂರಿನಲ್ಲಿ 1 ಲೀಟರ್ ಪೆಟ್ರೋಲಿಗೆ 25-27 ಕಿ. ಮೀ ದೂರ ಓಡಿದರೆ ಇಲ್ಲಿಯ ಲ್ಯಾಂಬ್ರೆಟ್ಟಾ ರಿಕ್ಷಾಗಳಿಗೆ [1.75 ಅಶ್ವಶಕ್ತಿಯ] 1 ಲೀಟರ್ ಪೆಟ್ರೋಲಿಗೆ 16-18 ಕಿ.ಮೀ. ಓಡುತ್ತದೆ. ಇದಕ್ಕೆ ಸಾಕ್ಷಿ 1980ನೇ ಸಾಲಿನಲ್ಲಿ ಆರ್. ಟಿ. ಓ. ಕಛೇರಿ ಎದುರಿನಲ್ಲಿ ನಾವು ಹೋರಾಟ ಮಾಡಿದ ಸಂದರ್ಭದಲ್ಲಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು 1 ಲೀಟರ್ ಪೆಟ್ರೋಲನ್ನು ರಿಕ್ಷಾಕ್ಕೆ ಹಾಕಿ ಪ್ರಯೋಗ ಮಾಡಿ ಸರ್ಕಾರಕ್ಕೆ ಶಿಫಾರಸು ಮಾಡಿರುತ್ತಾರೆ.

ತಾ. 26-3-86ರಂದು ಮಲೆನಾಡಿಗೆ ಬರೇ ಹತ್ತು ಪೈಸೆ ಹೆಚ್ಚು ಮಾಡಿರುವುದರಿಂದ ಬರೇ ಪೆಟ್ರೋಲಿನ ವ್ಯತ್ಯಾಸ ಸಾಕಾಗುವುದಿಲ್ಲ.

ಮೀಟರ್ ದರ 2 ಪ್ರಯಾಣಿಕರ ಕನಿಷ್ಟ ದರ ರೂ 2-00. 3ಜನ ಪ್ರಯಾಣಿಕರಿಗೆ ರೂ.3-00ರನ್ನಿಂಗ್ ಕಿ. ಮೀ.ಗೆ 2ಜನ ಪ್ರಯಾಣಿಕರಿಗೆ 1-60ಪೈಸೆ. ಅಥವಾ ಮೀಟರ್ ದರ ನಿಗದಿ ಪಡಿಸುವ ಅಧಿಕಾರವನ್ನು ಸ್ಥಳೀಯ ಆರ್.ಟಿ.ಎ. ಅಧಿಕಾರಿಗಳಿಗೆ ನೀಡಬೇಕು. ಮೊದಲಾದ 7 ಬೇಡಿಕೆಗಳನ್ನು ಸರಕಾರದ ಮುಂದಿಟ್ಟಿದ್ದಾರೆ. ಎಂದು ಕೆ. ಅಬೂಬಕರ್ ತಿಳಿಸಿದ್ದಾರೆ.

[2ನೇ ಪುಟದಿಂದ]

ಘೋಷಿಸಿತು. ಇದರಿಂದ ಉದ್ರಿಕ್ತಗೊಂಡ ಆಡಳಿತ ವರ್ಗ ಹೋಟೆಲನ್ನು ಮುಚ್ಚಿ ಬಿಟ್ಟಿರುವುದಾಗಿ ತಿಳಿಸುವ ನೋಟೀಸಿನ ಜೊತೆಗೆ ಪರಿಹಾರ ಧನದ ಚೆಕ್ಕುಗಳನ್ನು ಕಾರ್ಮಿಕರ ಮನೆಯ ವಿಳಾಸಗಳಿಗೆ ರಿಜಿಸ್ಟರ್ ಪೋಸ್ಟ್ ಮೂಲಕ ಕಳಸಿದರು ಆದರೆ ಕಾರ್ಮಿಕರು ಅವನ್ನು ಸ್ವೀಕರಿಸದೆ ವಾಪಸು ಕಳಿಸಿದರು.

ಹೀಗಿರುವಾಗ 1985ರ ಡಿಸೆಂಬರ್ 37ರಂದು ನಡುರಾತ್ರಿಯ ವೇಳೆ ಗುಡಾರದಲ್ಲಿ ಮಲಗಿದ್ದ ಕಾರ್ಮಿಕರನ್ನು ಹೊರಗೆಳೆದು ಹೊಡೆದ ಮಾಲೀಕರ ಗೂಂಡಾಗಳು ಡೇರೆಗೆ ಬೆಂಕಿ ಹಚ್ಚಿದರು. ಊಟಕ್ಕಾಗಿ ಸಂಗ್ರಹಿಸಿದ್ದ ದವಸ ಧಾನ್ಯಗಳು, ಬಟ್ಟೆಬರೆಗಳು ಬೆಂಕಿಗೆ ಆಹುತಿಯಾದವು.ಆಗ ಸ್ಥಳಕ್ಕೆ ಧಾವಿಸಿದ ಅಗ್ನಿ ಶಾಮಕ ದಳ ಬೆಂಕಿಯನ್ನು ನಂದಿಸಿತು. ಆದರೂ ಹೋರಾಟ ಸಾಗಿದೆ.

FORM IV
(See Rule 8)

1. Place of Publication : BANGALORE
2. Periodicity of its Publication : WEEKLY
3. Printer's Name : P. RAMACHANDRA RAO
   Whether citizen of India ? : YES
   Address : L-56, K.V. Temple Street, Sultanpet, Bangalore-53.
4. Publisher's Name : P. RAMACHANDRA RAO
   Whether citizen of India ? : YES
   Address : L-56, K.V. Temple Street, Sultanpet, Bangalore-53.
5. Editor's Name : P. RAMACHANDRA RAO
   Whether citizen of India ? : YES
   Address : L-56, K.V. Temple Street, Sultanpet, Bangalore-53.

Name and address of individuals who own the News Paper and Partners or Share holders holding more thane one percent of the total capital. : Communist Party of India. (Marxist) Karnataka State Committee, K.V. Temple Street, Sultanpet, B'lore-53

I, P. RAMACHANDRA RAO hereby declare that the perticulars given above are true to the best of my knowledge and belief.

27-2-1987

P. RAMACHANDRA RAO
Signature of Publisher

ವ್ಯಾಪಾರೋದ್ಯಮವಾದ ಭಯೋತ್ಪಾದನೆ

ಮುಕ್ತ ಉದ್ಯಮದ ಸ್ವತಂತ್ರ ನಾಡು ಅಮೆರಿಕ. ಅಲ್ಲಿ ಹಣ ಸಂಪಾದಿಸಲು ನೀವು ಏನು ಬೇಕಾದರೂ ಮಾಡಬಹುದು. ಕೈ ಹಿಡಿದದ್ದೆಲ್ಲ ವ್ಯಾಪಾರವಾಗುತ್ತದೆ' ಹಣ ತರುತ್ತದೆ. ಅದು ಒಳ್ಳೆಯದೋ ಅಥವಾ ಕೆಟ್ಟದ್ದೊ, ಜನರಿಗೆ ಸಂಕಟ ತರುವುದೋ ಅಥವಾ ಒಳ್ಳೆಯದನ್ನು ಮಾಡುವುದೋ ಒಟ್ಟಿನಲ್ಲಿ ಡಾಲರ್ ಗಳಿಕೆ ಮುಖ್ಯ. ಲಾಭ ತರುತ್ತದೆ ಎಂದು ಕಂಡುಬಂದರೆ ಸರಿ, ಏನೂ ಮಾಡುವುದಕ್ಕೂ ಅಡ್ಡಿಯಿಲ್ಲ.

ಅಮೆರಿಕಾದ ಮಿಲಿಟರಿ ಕೈಗಾರಿಕೋದ್ಯಮ ಮಾರಕಾಸ್ತ್ರಗಳನ್ನು ಮಾರಾಟ ಮಾಡಿ ಕೋಟಿಗಟ್ಟಲೆ ಲಾಭ ಸಂಪಾದಿಸುತ್ತಿದೆ. ಶಸ್ತ್ರಾಸ್ತ್ರ ಪೈಪೋಟಿಯ ವರ್ಧನೆ ಮತ್ತು ಎಲ್ಲಾದರೊಂದು ಕಡೆ ಯುದ್ಧ ಎಂದರೆ ಈ ಉದ್ಯಮಗಳಿಗೆ ಖುಷಿ. ಲಾಭದ ಸುರಿಮಳೆ. ಹಾಗಾಗಿ ಅವರನ್ನು "ಸಾವಿನ ಮಾರಾಟಗಾರರು" ಎಂದು ಕರೆಯುವುದರಲ್ಲಿ ಆಶ್ಚರ್ಯವೇನಿಲ್ಲ. ಮಾರಕ ದ್ರವ್ಯಗಳ ಕಳ್ಳ ವ್ಯಾಪಾರಿಗಳು ಹೆಚ್ಚು ಹೆಚ್ಚು ಜನ ನಷ್ಟ ಚಟಕ್ಕೆ ಸಿಲುಕಿಸುತ್ತಿದ್ದಾರೆ. ಜನರ ಆರೋಗ್ಯ ಕೆಡುವುದರ ಚಿಂತೆ ಅವರಿಗಿಲ್ಲ. ನೀವು ಏನು ಮಾರಾಟ ಮಾಡುತ್ತೀರಿ ಎಂಬುದು ಮುಖ್ಯವಲ್ಲ, ಡಾಲರುಗಳನ್ನು ಗಳಿಸುವುದೇ ಗುರಿ.

ಲಾಭದಾಹಕ್ಕೆ ಇತ್ತೀಚೆಗೆ ಸೇರಿರುವ ಉದ್ಯಮ ಭಯೋತ್ಪಾದನೆ. ಪ್ರಪಂಚದಲ್ಲಿ ಹೆಚ್ಚುತ್ತಿರುವ ಭಯೋತ್ಪಾದನಾ ಕೃತ್ಯಗಳು ಅಮೆರಿಕಾದ ಉದ್ಯಮಗಳಿಗೆ ಲಾಭದಾಯಕವಾಗಿ ಪರಿಣಮಿಸಿದೆ. ಅದು ಎರಡೂ ರೀತಿಯಲ್ಲಿ ಅವರಿಗೆ ಪ್ರಯೋಜನಕಾರಿಯಾಗಿದೆ. ಒಂದು ಕಡೆ ಭಯೋತ್ಪಾದಕರಿಗೆ ತರಬೇತಿ ನೀಡುವುದು ಮತ್ತು ಅವರಿಗೆ ಆಯುಧಗಳನ್ನು ಒದಗಿಸುವುದು ನಡೆಯುತ್ತಿದ್ದರೆ, ಇನ್ನೊಂದು ಕಡೆ ಭಯೋತ್ಪಾದನೆಯನ್ನು ತಡೆಯುವ ಪ್ರತಿಸಾಧನಗಳನ್ನು ಮಾರಾಟ ಮಾಡಲಾಗುತ್ತಿದೆ ಖಲಿಸ್ತಾನಿಗಳಿಗೆ ತರಬೇತಿ ನೀಡಿದ ಫ್ರಾಂಕ್ ಕ್ಯಾಂಪರ್‌ನಂಥವರು ಭಯೋತ್ಪಾದಕರು ಮತ್ತು ಕೂಲಿ ಸಿಪಾಯಿಗಳಿಗೆ ತರಬೇತಿ ನೀಡುತ್ತ, ಅವರಿಗೆ ವಿಧ್ವಂಸ ಚರ್ಯೆಗಳನ್ನು ಕಲಿಸಿ ಹಣ ಗಳಿಸುತ್ತಿದ್ದರೆ, ಅಮೆರಿಕಾದ ಉದ್ಯಮಿಗಳು ಭಯೋತ್ಪಾದನೆಯ ಪ್ರತಿಷೇಧದ ಸಾಧನಗಳನ್ನು, ಸೀಮಿತ ಪ್ರದೇಶಗಳಲ್ಲಿ ಪಹರೆ ನಡೆಸುವ ಟಿ.ವಿ. ಕ್ಯಾಮರಾಗಳು, ಪ್ರವೇಶ ನಿಯಂತ್ರಣ ಉಪಕರಣಗಳು, ಅರ್ಮರ್ಡ್ ಕಾರುಗಳು ಮತ್ತು ಭದ್ರತಾ ವ್ಯವಸ್ಥೆಗಳು ಮೊದಲಾದುವನ್ನು ತಯಾರಿಸಿ, ಮಾರಾಟ ಮಾಡಿ ಹಣ ದೋಚುತ್ತಿವೆ. ಭದ್ರತಾ ಸಲಹೆಗಾರರು, ವೀಕ್ಷಕರು ಮತ್ತು ಭಯೋತ್ಪಾದನೆಯನ್ನು ವಿರೋಧಿಸಲು ತರಬೇತಿ ಕೇಂದ್ರಗಳ ಸಂಖ್ಯೆಯು ಈಚೆಗೆ ವಿಪರೀತವಾಗಿ ಹೆಚ್ಚಿದೆ.

ಎಂಬುದಕ್ಕೆ ಇದು ಸಾಕ್ಷಿ. ಅಮೆರಿಕಾದಲ್ಲಿ ಖಾಸಗೀ ಸಂಸ್ಥೆಗಳು ಒದಗಿಸುತ್ತಿರುವ ಭದ್ರತಾ ವ್ಯವಸ್ಥೆಗಳಿಗೆ 1981ರಲ್ಲಿ 22 ಬಿಲಿಯ ಡಾಲರುಗಳು ಖರ್ಚಾಗಿತ್ತು. ಅದು ವರ್ಷಕ್ಕೊವರ್ಷ ಶೆ.12 ರಿಂದ 15ರಷ್ಟು ಹೆಚ್ಚುತ್ತಿದೆ. ಇದು ಸರಕಾರ ಪೋಲೀಸು, ಡೆಪ್ಯುಟಿಗಳು, ಸಶಸ್ತ್ರ ಪೋಲೀಸು ಪಡೆ ಮತ್ತು ಫೆಡರಲ್ ಭದ್ರತಾ ವ್ಯವಸ್ಥೆಗಳಿಗೆ ಖರ್ಚು ಮಾಡುತ್ತಿರುವುದಕ್ಕಿಂತ ಎಷ್ಟೋ ಹೆಚ್ಚು. [ಇವುಗಳಿಗೆ ಸರ್ಕಾರ ಖರ್ಚು ಮಾಡುತ್ತಿರುವುದು 14ಬಿಲಿಯ ಡಾಲರುಗಳಾಗುತ್ತವೆ.]

ಭಯೋತ್ಪಾದನೆಯ ವಿರೋಧಿ ಪರಿಣತಿಯನ್ನು ಹೆಚ್ಚಾಗಿ ಕೊಳ್ಳುತ್ತಿರುವುದು ಅಮೆರಿಕಾದ ಸರ್ಕಾರ. ಮಿಲಿಟರಿ ಕೈಗಾರಿಕಾ ಸಂಕೀರ್ಣದ ವಿಷಯದಲ್ಲೂ ಹಾಗೆಯೇ. ಅವು ತಯಾರಿಸುವ ಶಸ್ತ್ರಾಸ್ತ್ರಗಳಿಗೆ ಪ್ರಧಾನವಾದ ಗಿರಾಕಿ ಅಮೆರಿಕಾದ ಸರ್ಕಾರ. ಭಯೋತ್ಪಾದನೆ ವಿರೋಧಿ ನಿರ್ಮಾಣ ವ್ಯವಸ್ಥೆ, ತರಬೇತಿ, ಸಂಘಟನೆ ಮತ್ತು ಇಲೆಕ್ಟ್ರಾನಿಕ್ ಭದ್ರತಾ ಉಪಕರಣಗಳಿಗಾಗಿ ಮುಂದಿನ ಹತ್ತು ವರ್ಷಗಳಲ್ಲಿ ಖರ್ಚು ಮಾಡಲು ರೀಗನ್‌ರ ಆಡಳಿತೆಯು ಕಾಂಗ್ರೆಸ್ ಸಭೆಯನ್ನು 4.2 ಬಿಲಿಯ ಡಾಲರುಗಳನ್ನು ಕೇಳಿದೆ. ಈ ವ್ಯವಸ್ಥೆಗಳೆಲ್ಲವೂ ಅಮೆರಿಕಾದ ಹೊರಗೆ ಬೇರೆ ಬೇರೆ ದೇಶಗಳಲ್ಲಿರುವ 300 ಸೈನಿಕ ನೆಲೆಗಳ ಉಪಯೋಗಕ್ಕಾಗಿ ಆಗಿದೆ. ಈ ಹಣದಲ್ಲಿ ಶೇಕಡಾ 75 ರಷ್ಟು ಪಾಲು ಅಂಥ ವ್ಯವಸ್ಥೆಗಳನ್ನು ನಿರ್ಮಿಸುವ ಉದ್ಯಮಿಗಳು ಮತ್ತು ಕಂಟ್ರಾಕ್ಟರುಗಳಿಗೆ ಹೋಗುತ್ತದೆ.

ಮಾರಾಟಕ್ಕೆ ಸುಲಭವಾಗಿ ಲಭ್ಯವಿರುವವರು ಇವರು

ಭಯೋತ್ಪಾದನೆಯ ಕೃತ್ಯಗಳಿಂದ ಮಾರುಕಟ್ಟೆಯ ಮೇಲಾಗಿರುವ ಪರಿಣಾಮವನ್ನು ಕುರಿತು "ವಾಷಿಂಗ್ಟನ್ ಪೋಸ್ಟ್" ಪತ್ರಿಕೆಗೆ ನೀಡಿದ ಸಂದರ್ಶನದಲ್ಲಿ ಅಮೆರಿಕಾದ ಉದ್ಯಮಿಗಳಲ್ಲಿ ಒಬ್ಬರಾದ ವಾರೆನ. ಎಚ್. ಮೆಟ್ಟನರ್‌ರವರು ಹೀಗೆ ಹೇಳಿದ್ದಾರೆ ! "ಭಯೋತ್ಪಾದನೆಯನ್ನು ಕುರಿತ ಪರಿಣತರ ಸಂಖ್ಯೆಯನ್ನು ನೋಡಿದರೇ ಬೇಸರ ಬರುತ್ತದೆ .... ಇತ್ತೀಚೆಗಿನ ವರ್ಷಗಳಲ್ಲಿ ಹೆಚ್ಚು ಬೇಡಿಕೆಯಿದ್ದು ಮಾರಾಟಕ್ಕೆ ಸುಲಭವಾಗಿ ಲಭ್ಯವಿರುವವರು ಅವರು, ಹಾಗೂ ಅವಕ್ಕೆ ಸಂಬಂಧಿಸಿದ ಉಪಕರಣಗಳು. ಯಾವುದರ ಮೇಲಾದರೂ ಸರಿಯೇ ಭಯೋತ್ಪಾದನೆ ಎಂದು ಚೀಟಿ ಅಂಟಿಸಿದರೆ ಸಾಕು, ಜನ ಹೇಗೆ ಕೊಳ್ಳುತ್ತಾರೆ ಎಂಬುದನ್ನು ನೋಡಿ, ಕೊಳ್ಳುವವರಿಗೆ ಅದರಿಂದೇನೂ ಪ್ರಯೋಜನವಿಲ್ಲ, ದಿದ್ದರೂ ದಿಗ್ಭ್ರಮೆಯಾಗುತ್ತದೆ".

ಜನರ ಭಯವನ್ನು ಅಮೆರಿಕಾದ ಉದ್ಯಮಿಗಳು ಹೇಗೆ ತಮ್ಮ ಲಾಭಕ್ಕಾಗಿ ಉಪಯೋಗಿಸಿಕೊಳ್ಳುತ್ತಿದ್ದಾರೆ

ಹಾಗಾಗಿ, ಭಯೋತ್ಪಾದನಾ ಕೃತ್ಯಗಳು ಹೆಚ್ಚಿದಷ್ಟೂ ಅಮೆರಿಕಾದ ಉದ್ಯಮಿಗಳಿಗೆ ಲಾಭದಾಯಕವಾಗಿರುತ್ತದೆ. ಅದಕ್ಕಾಗಿ ಅವರು ಭಯೋತ್ಪಾದನೆ ಕೃತ್ಯಗಳಿಗೆ ಪ್ರೋತ್ಸಾಹ ನೀಡುವುದರಲ್ಲಿ ಆಶ್ಚರ್ಯವೇನಿಲ್ಲ.

ಅಲ್ಬೇನಿಯಾದಲ್ಲಿ ಏನು ನಡೆದಿದೆ ?

ಕೆಲವು ವಾರಗಳ ಹಿಂದೆ ಡೆಕ್ಕನ್ ಹೆರಾಲ್ಡ್ ಪತ್ರಿಕೆಯ ಸಾಪ್ತಾಹಿಕ ಪುರವಣಿಯೊಂದರಲ್ಲಿ ಸಮಾಜವಾದಿ ರಾಷ್ಟ್ರ ಅಲ್ಬೇನಿಯದ ಕುರಿತು ಪಾಶ್ಚಾತ್ಯ ಬರಹಗಾರರೊಬ್ಬರ ಭಯಾನಕ ವರದಿಯೊಂದು ಪ್ರಕಟವಾಗಿತ್ತು ಸ್ಟಾಲಿನ್ ಯುಗದಿಂದ ಇನ್ನೂ ಹೊರಬರದಿರುವ ಈ ರಾಷ್ಟ್ರದಲ್ಲಿ ಜನ ಉಸಿರುಬಿಗಿಹಿಡಿದುಕೊಂಡು ಸ್ವಾತಂತ್ರ್ಯರಹಿತರಾಗಿ ನರಳುತ್ತ ಬದುಕುತ್ತಿದ್ದಾರೆಂದೂ ಈ ಲೇಖನದಲ್ಲಿ ಚಿತ್ರಿಸಲಾಗಿತ್ತು. ಆದರೆ ನಿಜ ಸಂಗತಿ ಏನು ? ಅಲ್ಬೇನಿಯಾದಲ್ಲಿ ಏನು ನಡೆಯುತ್ತಿದೆ? ಎಂಬ ಬಗ್ಗೆ 'ನೂಟೈಮ್ಸ್' ವರದಿಗಾರರೊಬ್ಬರು ಆ ದೇಶವನ್ನು ಸಂದರ್ಶಿಸಿ 10-11-1986ರ ಸಂಚಿಕೆಯಲ್ಲಿ ಬರೆದಿರುವ ಲೇಖನ ಅಲ್ಬೇನಿಯಾದ ಬಗೆಗಿನ ಈ ಭಯಾನಕ ಕತೆಗಳು ಸುಳ್ಳೆಂದು ಸಾಬೀತು ಪಡಿಸುತ್ತಿವೆ.

ಶತಮಾನಗಳ ಕಾಲ ಟರ್ಕಿ ದೇಶದ ದಾಸ್ಯದಲಿದ್ದ ಅಲ್ಬೇನಿಯಾ ಸುಮಾರು ಎಂಬತ್ತು ವರ್ಷಗಳ ಹಿಂದೆ ರಾಜಕೀಯ ಸ್ವಾತಂತ್ರ್ಯ ಪಡೆದಿದ್ದರೂ ಅದಕ್ಕೆ ನಿಜವಾದ ಅರ್ಥದಲ್ಲಿ ಸ್ವಾತಂತ್ರ್ಯಬಂದದ್ದು 1944ರಲ್ಲಿ, ಎರಡನೇ ಮಹಾಯುದ್ಧದ ವೇಳೆ ಅಲ್ಬೇನಿಯಾವನ್ನು ಆಕ್ರಮಿಸಿಕೊಂಡಿದ್ದ ಇಟಲಿಯ ಸರ್ವಾಧಿಕಾರಿಗಳನ್ನೂ ಜರ್ಮನ್ ನಾಯಿಗಳನ್ನೂ ಕೆಂಪು ಸೇನೆ ಹೊಡೆದೋಡಿಸಿದ ಮೇಲೆ. ಅಪಾರವಾದ ನೈಸರ್ಗಿಕ ಸಂಪತ್ತನ್ನು ಹೊಂದಿರುವ ಈ ರಾಷ್ಟ್ರ ಸ್ವಾವಲಂಬನೆಯ ಮಾರ್ಗದಲ್ಲಿ ತನ್ನ ಸಂಪನ್ಮೂಲಗಳನ್ನು ಬಳಸಿಕೊಂಡು ಪ್ರಗತಿಯತ್ತ ಮುನ್ನಡೆಯುತ್ತಿದೆ ಅಲ್ಬೇನಿಯಾ ಲೇಬರ್ ಪಾರ್ಟಿ (ಎ.ಪಿ.ಎಲ್.) ಯ ಪ್ರಧಾನ ಕಾರ್ಯದರ್ಶಿ ರಮಿಜ್ ಅಲಿಯಾ ಹೇಳುವಂತೆ ಅಲ್ಬೇನಿಯಾದ ವಿದೇಶಿ ನೀತಿಯ ಆಧಾರವೆಂದರೆ ಸ್ವಾವಲಂಬನೆ. ಸಾಲದಿಂದ ವಿಮುಕ್ತವಾದ ಅರ್ಥವ್ಯವಸ್ಥೆಯೇ ಅದರ ಗುರಿ. ಅಲ್ಬೇನಿಯಾ ಸಂಪೂರ್ಣ ಮುಕ್ತವೂ ಅಲ್ಲ ಸಂಪೂರ್ಣ ನಿರ್ಬಂಧಿತವೂ ಅಲ್ಲದ ರಾಷ್ಟ್ರ. ಈಗೀಗ ಅದು ಬಾಹ್ಯ ಜಗತ್ತಿಗೆ ತನ್ನನ್ನು ಹೆಚ್ಚು ಹೆಚ್ಚಾಗಿ ತೆರೆದುಕೊಳ್ಳುತ್ತಿದೆ. ಯುಗೋಸ್ಲಾವಿಯಾ ಮತ್ತು ಅಲ್ಬೇನಿಯಾಗಳ ನಡುವೆ ಏರ್ಪಟ್ಟ ಒಂದು ಒಪ್ಪಂದಕ್ಕನುಗುಣವಾಗಿ ಈ ಎರಡೂ ರಾಷ್ಟ್ರಗಳಿಗೆ ಸಂಪರ್ಕ ಕಲ್ಪಿಸುವ 65 ಕಿ.ಮೀ. ಉದ್ದದ ರೈಲು ಮಾರ್ಗವಾಗುತ್ತಿದೆ. ಇದು ಮೊತ್ತಮೊದಲ ಬಾರಿಗೆ ಅಲ್ಬೇನಿಯಾವನ್ನು ಪೂರ್ವ ಯುರೋಪಿನ ಇತರ ರಾಷ್ಟ್ರಗಳ ಜೊತೆಗೆ ಜೋಡಿಸಿದೆ. ಅಲ್ಬೇನಿಯಾದ ಅರ್ಧಾಂಶಕ್ಕಿಂತಲೂ ಹೆಚ್ಚು ವಿದೇಶಿ ವ್ಯಾಪಾರ ಯುರೋಪಿನ ಸಮಾಜವಾದಿ ರಾಷ್ಟ್ರಗಳ ಜೊತೆಗಿದೆ.

ರಾಜಧಾನಿ ಟಿರಾನಾದ ಮುಖ್ಯ ರಸ್ತೆ [ಹುತಾತ್ಮರರಸ್ತೆ] ಯಲ್ಲಿ ಸಂಜೆಯ ವೇಳೆ ಜನ ಗುಂಪು ಗುಂಪಾಗಿ ಸುತ್ತಾಡುತ್ತಾರೆ. ಅವರೆಲ್ಲ ವಿವಿಧ ರೀತಿಯ ಬಣ್ಣ ಬಣ್ಣದ ಬಟ್ಟೆ ತೊಟ್ಟಿರುತ್ತಾರೆ. ಈ ರಸ್ತೆಯ ಕೊನೆಯಲ್ಲಿ ಲೆನಿನ್ ಮತ್ತು ಸ್ಟಾಲಿನ್ ಅವರ ಸ್ಮಾರಕಗಳಿವೆ. ಪುರಾತನ ಮಸೀದಿ ಮತ್ತು ಚಾರಿತ್ರಿಕ ಮಹತ್ವವಿರುವ ಚರ್ಚುಗಳನ್ನು ದುರಸ್ತಿಪಡಿಸಿ ಜತನದಿಂದ ಕಾಪಾಡಿಕೊಂಡು ಬರಲಾಗಿದೆ. ಕೆಲವು ಆರಾಧನಾ ಸ್ಥಳಗಳ ಸಾಂಸ್ಕೃತಿಕ ಮಹತ್ವವನ್ನು ಪರಿಗಣಿಸಿ ಅವುಗಳನ್ನು ಸುಸಜ್ಜಿತವಾದ ವಸ್ತು ಸಂಗ್ರಹಾಲಯಗಳನ್ನಾಗಿಯೂ ಪರಿವರ್ತಿಸಲಾಗಿದೆ. ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಅಲ್ಬೇನಿಯಾ 1976ರಲ್ಲೇ ಸ್ವಾವಲಂಬನೆ ಸಾಧಿಸಿದೆ.

ಕ್ರಾಂತಿಗೆ ಮೊದಲು ಸುಮಾರು ಒಂದು ಮಿಲಿಯದಷ್ಟಿದ್ದ ಜನ ಸಂಖ್ಯೆ ತ್ರೀವ್ರಗತಿಯಲ್ಲಿ ಹೆಚ್ಚಾಗಿದ್ದು ಇದೀಗ ಮೂರುಮಿಲಿಯವನ್ನು ದಾಟಿರುವ ಕಾರಣ ಜನ ಸಂಖ್ಯೆಯ ಏರಿಕೆಗೆ ಅನುಗುಣವಾಗಿ ಉತ್ಪಾದನೆಯನ್ನು ವೃದ್ಧಿಪಡಿಸಬೇಕಾದುದು ಅಲ್ಬೇನಿಯಾದ ಪಾಲಿಗೆ ಅನಿವಾರ್ಯ. ಇದಕ್ಕಾಗಿ ಹಳೆಯ ಕ್ರಮಗಳ ಜೊತೆಗೆ ಆಧುನಿಕ ವಿಧಾನಗಳನ್ನೂ ಕೈಗೊಳ್ಳಲಾಗುತ್ತಿದೆ. ಈ ವರ್ಷ ಆರಂಭಗೊಂಡಿರುವ ಎಂಟನೆಯ ಪಂಚವಾರ್ಷಿಕ ಯೋಜನೆಯ ಅಂತ್ಯದಲ್ಲಿ ಅಲ್ಬೇನಿಯಾದ ರಾಷ್ಟ್ರೀಯ ಆದಾಯ ಶೇ 34-36 ರಷ್ಟು, ಕೈಗಾರಿಕಾ ಉತ್ಪಾದನೆ 29-31 ರಷ್ಟು, ವ್ಯವಸಾಯೋತ್ಪಾದನೆ ಶೇ. 34-36ರಷ್ಟು, ಮೂಲ ಬಂಡವಾಳ ವಿನಿಯೋಗ ಶೇ. 10-12 ರಷ್ಟು ಮತ್ತು ನೈಜ ಆದಾಯ ಶೇ. 7-9 ರಷ್ಟು, ಹೆಚ್ಚಾಗುವ ನಿರೀಕ್ಷೆಯಿದೆ. ಮುಂದಿನ ಐದು ವರ್ಷಗಳಲ್ಲಿ ವ್ಯವಸಾಯ ಯೋಗ್ಯ ಭೂಮಿ ಇನ್ನೂ 22 ಸಾವಿರ ಹೆಕ್ಟೇರುಗಳಷ್ಟು ಹೆಚ್ಚಾಗಲಿದೆ ಎಂಭತ್ತೈದು ಸಾವಿರ ಹೊಸ ಮನೆಗಳನ್ನು ಕಟ್ಟುವ ಯೋಜನೆ ಇದೆ. ಎರಡನೇ ಮಹಾಯುದ್ಧದಲ್ಲಿ ತತ್ತರಿಸಿ ಹೋಗಿದ್ದ ಈ ಪುಟ್ಟ ರಾಷ್ಟ್ರ ತನ್ನ ಸ್ವಂತ ಕಾಲಿನ ಮೇಲೆ ನಿಂತು ಅಮೋಘ ಪ್ರಗತಿ ಸಾಧಿಸುತ್ತಿರುವುದು ನಿಜಕ್ಕೂ ಶ್ಲಾಘನೀಯ. ಹಲವಾರು ಅಂತರಾಷ್ಟ್ರೀಯ ಪ್ರಶ್ನೆಗಳಲ್ಲಿ ಅಲ್ಬೇನಿಯಾ ಅನುಸರಿಸುವ ಧೋರಣೆ ಏನೇ ಇದ್ದರೂ ಸಮಾಜವಾದಿ ರಾಷ್ಟ್ರವಾಗಿ ಅದು ಸರ್ವತೋಮುಖ ಪ್ರಗತಿಸಾಧಿಸುತ್ತಿರುವುದನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಬಂಡವಾಳಶಾಹಿ ಬರಹಗಾರರಿಗೆ ಇದು ಸಹ್ಯವಾಗದಿರುವುದೂ ಅಷ್ಟೇ ಸಹಜ

ನವದೆಹಲಿಯಲ್ಲಿ "ಆಫ್ರಿಕಾ ನಿಧಿ" ಸಭೆ

ಕಳೆದ ನವೆಂಬರ್‌ನಲ್ಲಿ ಹರಾರೆಯಲ್ಲಿ ಸಮಾವೇಶಗೊಂಡಿದ್ದ ಅಲಿಪ್ತ ಸಮ್ಮೇಳನದಲ್ಲಿ ಆಫ್ರಿಕಾವರ್ಣೀಯ ಸರಕಾರದ ವಿರುದ್ಧ ತೀವ್ರ ಕ್ರಮಗಳನ್ನು ತೆಗೆದುಕೊಳ್ಳುವಂತೆ ಅಂಗೀಕರಿಸಿದ ನಿರ್ಣಯಗಳಲ್ಲಿ ಅತ್ಯಂತ ಮುಖ್ಯವಾಗಿದ್ದ 'ಆಫ್ರಿಕಾ ನಿಧಿ'ಯ ಸಭೆ ನವದೆಹಲಿಯಲ್ಲಿ ಸೇರಿತ್ತು.

ಒಂಬತ್ತು ರಾಷ್ಟ್ರಗಳ ಪ್ರಮುಖ ಪ್ರತಿನಿಧಿಗಳಾದ ರಾಬರ್ಟ್ ಮುಗಾಬೆ, ಕೆನೆತ್ ಕೌಂಡಾ ಸಸಾವು, ಸಿನಾನ್ ಹಸಾನಿ, ಕೌಲ್ ಅಲ್ಪೋನ್ಸೋ ಮುಂತಾದವರು ಭಾಗವಹಿಸಿದ್ದ ಸಭೆ ಮೊತ್ತ ಮೊದಲನೆಯದಾಗಿ ಆಫ್ರಿಕಾದ ಹೋರಾಟದ ಉಸಿರಾಟದ ಮೊಜಾಂಬಿಕ್‌ನ ಅಧ್ಯಕ್ಷ ಸಮೋರಾ ಮೊಚೆಲ್‌ರವರ ದುರ್ಮರಣಕ್ಕೆ ತೀವ್ರ ಸಂತಾಪ ವ್ಯಕ್ತಪಡಿಸಿ ಒಂದು ನಿಮಿಷ ಮೌನ ಆಚರಿಸಿತು.

ಈ ಆಫ್ರಿಕಾನಿಧಿ ಯೋಜನೆಯ ಚೇರ್ಮನ್‌ರಾದ ಭಾರತ ಪ್ರಧಾನಿ ಶ್ರೀ ರಾಜೀವ್ ಗಾಂಧಿಯವರು ಭಾರತ 40 ಮಿಲಿಯ ಡಾಲರ್ ಹಣವನ್ನು ಸಂಗ್ರಹಿಸಿಕೊಡುವುದಾಗಿ ಸಭಿಕರ ಹರ್ಷೋದ್ಗಾರಗಳ ನಡುವೆ ವ್ಯಕ್ತಪಡಿಸಿತು. ಒಟ್ಟು 70 ಮಿಲಿಯ ಡಾಲರುಗಳು ಈಗಾಗಲೇ ಕೂಡಿದೆ. ಪ್ರಿಟೋರಿಯಾ ಸರಕಾರದ ದಬ್ಬಾಳಿಕೆಯ ವಿರುದ್ಧ ಮುಂಚೂಣಿ ರಾಷ್ಟ್ರಗಳು ನೆರವಾಗುವಂತೆ ಸಂಗ್ರಹಿಸಲಾಗುತ್ತಿರುವ ಈ ನಿಧಿ ರಾಷ್ಟ್ರಗಳ ಆರ್ಥಿಕ ಸ್ವಾತಂತ್ರ್ಯಕ್ಕೆ ಸಹಾಯ ಮಾಡುತ್ತದೆಂದು ನಿರೀಕ್ಷಿಸಲಾಗಿದೆ.

ಆಫ್ರಿಕಾದ ವರ್ಣ ನೀತಿಗೆ ಕೊನೆ ಹಾಡಲು ಈ ಆಫ್ರಿಕಾ ನಿಧಿ ಒಂದಿಷ್ಟಾದರೂ ಸಹಾಯ ಮಾಡುವಲ್ಲಿ ಶ್ರಮಿಸುತ್ತದೆ" ಎಂದು ರಾಜೀವ್ ಗಾಂಧಿಯ ಮಾತನ್ನು ಇತರ ಪ್ರಮುಖರೂ ಒಪ್ಪಿಕೊಂಡರಲ್ಲದೆ 'ಇದು ನಾಳಿನ ಹೋರಾಟದ ದನಿ'ಯಾಗಿ ಮಾರ್ಪಾಟಾಗುವ ಆಶಯವನ್ನು ವ್ಯಕ್ತಪಡಿಸಿದರು.

ದ. ಆಫ್ರಿಕಾದ ವಿರುದ್ಧ ಆರ್ಥಿಕ ದಿಗ್ಬಂಧನ ಹೇರಲು ಎಲ್ಲಾ ರಾಷ್ಟ್ರಗಳು ಸ್ವಯಂ ಸ್ಫೂರ್ತಿಯಿಂದ ಮುಂದಾಗಲು ಸಮ್ಮೇಳನ ಕರೆ ನೀಡಿತು.

ಈ ನಿಧಿ ಸಂಗ್ರಹ ಸಭೆಯ ಆರಂಭದಲ್ಲಿ ತಮಿಳುನಾಡಿನ ವೆಲ್ಲೂರಿನ ಶಾಲಾ ಬಾಲಕ ಹೇಮಂತ ಶಮೀನ್ ಆಫ್ರಿಕಾ ನಿಧಿಗಾಗಿ ಸಂಗ್ರಹಿಸಿದ್ದ ನೂರಐವತ್ತು ರೂಪಾಯಿಗಳನ್ನು ಭಾವಪೂರಿತ ಹರ್ಷೋದ್ಗಾರ, ಹಾಗೂ ಸುಮಾರು ನಿಮಿಷಗಳ ದೀರ್ಘ ಚಪ್ಪಾಳೆಯ ನಡುವೆ ಆಫ್ರಿಕಾ ನಿಧಿಗೆ ಅರ್ಪಿಸಿದರು. ಈ ಸಂದರ್ಭದಲ್ಲಿ ಸಭೆಯಲ್ಲಿ ಹಲವು ಕ್ಷಣಗಳ ಕಾಲ ಭಾವಪೂರಿತ ಮೌನ ನೆಲೆಮಾಡಿತ್ತು.

(1ನೇ ಪುಟದಿಂದ)

ಬೆಂಗಳೂರು-ಮೈಸೂರು ಬ್ರಾಡ್‌ಗೇಜ್ ಪರಿವರ್ತನೆಗೆ ಬರೇ ರೂ2 ಕೋಟಿ, ಚಿತ್ರದುರ್ಗ-ರಾಯಬಾಗ ಮೀಟರ್ ಗೇಜ್ ಯೋಜನೆಗೆ ರೂ 66 ಲಕ್ಷ, ಬೆಂಗಳೂರು - ಜೋಲಾರ್‌ಪೇಟ್ ಮಾರ್ಗದ ವಿದ್ಯುದೀಕರಣಕ್ಕೆ ರೂ. 24 ಕೋಟಿ ಬೇಕಾಗಿದ್ದು, ಅದರ ಸಲುವಾಗಿ ಬರೇ ರೂ 10 ಲಕ್ಷ ಮಾತ್ರ. ಕೃಷ್ಣರಾಜಪುರದಲ್ಲಿ ಡೀಸಲ್ ಶೆಡ್ ನಿರ್ಮಾಣಕ್ಕೆ ರೂ 30 ಲಕ್ಷ. ಯಲಹಂಕದ ಗಾಲಿ ಕಾರ್ಖಾನೆಗೆ ರೂ. 2.15 ಕೋಟಿ. 1987-88 ರ ಒಟ್ಟು ಆದಾಯದಲ್ಲಿ ಕರ್ನಾಟಕಕ್ಕೆ ಕೊಡ ಮಾಡಿರುವುದು ಬರೇ ರೂ. 5.21 ಲಕ್ಷ ಮಾತ್ರ, ಅದರ ಪೈಕಿ ರೈಲ್ವೆ ಮಾರ್ಗಕ್ಕೆ ಬರೇ ರೂ.2.76 ಲಕ್ಷ.

ಕರ್ನಾಟಕದ ರೈಲ್ವೆ ಅಗತ್ಯದ ಕುರಿತು ಹಲವಾರು ವರ್ಷಗಳಿಂದಲೂ ಒತ್ತಾಯ ಪಡಿಸುತ್ತಲೇ ಬರಲಾಗಿದೆ. ಕಾರವಾರದಲ್ಲಿ ಈಗ ಅತಿ ದೊಡ್ಡ ಪ್ರಮಾಣದ ನೌಕಾ ನೆಲೆ ಸ್ಥಾಪನೆಯಾಗುತ್ತಿದೆ. ಪರಮಾಣುವಿನಿಂದ ವಿದ್ಯುದುತ್ಪಾದನೆಯ ಸ್ಥಾವರವೂ ಅಲ್ಲಿ ಸ್ಥಾಪನೆಗೊಳ್ಳಲಿದೆ. ಆದರೆ ಹುಬ್ಬಳ್ಳಿ ಕಾರವಾರ ರೈಲ್ವೆ ಪ್ರಸ್ತಾಪವಿಲ್ಲ.

ಹಲವಾರು ಬೇಡದ ರೈಲುಗಳ ಪ್ರಸ್ತಾಪವನ್ನು ಮಾಡಲಾಗಿದೆ. ಆದರೆ ಕರ್ನಾಟಕದ ಮಟ್ಟಿಗೆ ಅವುಗಳ ಲಾಭ ಇಲ್ಲ. ಹೀಗೆ ರೈಲ್ವೆ ಮಂತ್ರಿಗಳು ಕರ್ನಾಟಕವನ್ನು ಸಂಪೂರ್ಣ ಕಡೆಗಣಿಸಿದ್ದಾರೆ. ಆ ಕಾರಣದಿಂದಲೇ ನಮ್ಮ ರಾಜ್ಯದ ಬಹು ಭಾಗ ಜಿಲ್ಲೆಗಳಲ್ಲಿ ಔದ್ಯೋಗೀಕರಣಕ್ಕೆ ತಡೆ ಉಂಟಾಗುತ್ತಿದೆ. ಸಾಗಾಣಿಕೆಯ(ಬ್ರಾಡ್ ಗೇಜ್) ರೈಲ್ವೆ ವ್ಯವಸ್ಥೆ ಇಲ್ಲದಿರುವುದರಿಂದ, ಕರ್ನಾಟಕದಲ್ಲಿ ರೈಲ್ವೆ ಅಭಿವೃದ್ಧಿ ಸಲುವಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಹೋರಾಡುತ್ತಲೇ ಬಂದಿದೆ. ಆ ಹೋರಾಟ ಇನ್ನೂ ತೀವ್ರವಾಗಿ ಮುಂದುವರಿಯುವುದು ಅತ್ಯಗತ್ಯ.

ಕಾರ್ಲ್‌ಮಾರ್ಕ್ಸ್ ಹಾಗೂ ನಮ್ಮ ಬಜೆಟ್‌ಗಳು

[4ನೇ ಪುಟದಿಂದ]

ಕಪ್ಪು ಹಣ

ಇಂತಹ ಸರ್ವಶೋಷಕ ತೆರಿಗೆಗಳಿಂದ ತಪ್ಪಿಸಿಕೊಳ್ಳುವವರು ಯಾರು? ನಮ್ಮ ದೇಶದಲ್ಲಿ ದಿನದಿನಕ್ಕೂ ಹೊಸ ವಿನಾಯಿತಿಗಳನ್ನು ಪಡೆಯುತ್ತಿರುವವರೇ ಹೊರತು ಬೇರೆ ಯಾರು? ನಮ್ಮ ದೇಶದಲ್ಲಿ ಶ್ರೀಮಂತರಿಗೆ ಹಾಕಿರುವ ತೆರಿಗೆಗಳು ಬಂಡವಾಳಶಾಹಿಯ ಮೂಲ ಸ್ಥಾನಗಳಾದ ಪಾಶ್ಚಿಮಾತ್ಯ ದೇಶಗಳಲ್ಲಿ ಶ್ರೀಮಂತರ ಮೇಲೆ ಹಾಕಿರುವುದಕ್ಕಿಂತ ಕಡಿಮೆ ಎಂದು ಕಾರ್ತಿಕ್‌ರೈ ಹೇಳುತ್ತಾರೆ. ಆದರೆ ಈ ಕಡಿಮೆ ತೆರಿಗೆಯನ್ನೂ ನೀಡಲು ನಿರಾಕರಿಸುವ ಶ್ರೀಮಂತರು ಬಚ್ಚಿಟ್ಟ ಹಣ ಎಷ್ಟು ಗೊತ್ತೇ? 50,000 ಕೋಟಿ ರೂಗಳಷ್ಟು. ಈ ಹಣ ಅವರ ಅದಾದುಂದಿ ದರ್ಬಾರುಗಳಿಗೆ, ದೇಶದ ಹೊರಗಡೆ ಕದ್ದೊಯ್ಯುವುದಕ್ಕೆ ದೇಶದ ಆರ್ಥಿಕತೆಯ ನೆಲಗಟ್ಟನ್ನೇ ಅಸ್ಥಿರಗೊಳಿಸುವುದಕ್ಕೆ ಉಪಯೋಗವಾಗುತ್ತಿದೆ.

ಬಂಡವಾಳಶಾಹಿಯ ವರ್ಗ ಶೋಷಣೆ ಎಂದರೆ ಇದೇ? ಈ ದೇಶದ ಪೋಲೀಸ್ ಮೊದಲಾದ ದಮನಕಾರಿ ಯಂತ್ರಗಳೆಲ್ಲ ಯಾರನ್ನು ರಕ್ಷಿಸುವುದಕ್ಕಾಗಿ? ಲಾಭ ಬಡುಕರನ್ನು ಅತಿ ಆಸ್ತಿವಂತರನ್ನು ರಕ್ಷಿಸುವುದಕ್ಕಾಗಿ. ಈ ದೇಶದ ಸರ್ಕಾರ ಪಡೆಯುತ್ತಿರುವ ಸಾಲಗಳು ಯಾರ ಆಸ್ತಿಯನ್ನು ಬೆಳೆಸುವುದಕ್ಕಾಗಿ? ಈ ಶ್ರೀಮಂತರ ಆಸ್ತಿಯನ್ನು ಬೆಳೆಸುವುದಕ್ಕಾಗಿ. ತೆರಿಗೆಗಳು ಯಾತಕ್ಕಾಗಿ? ಶ್ರೀಮಂತರ ಜೇಬಿಗೆ ಹೋದ ಈ ಸಾಲಗಳನ್ನು ಅದರ ಬಡ್ಡಿಯನ್ನು ತೆರುವವರು ಯಾರು? ಸಾಮಾನ್ಯ ಜನರು

ಶ್ರೀಮಂತರು ಈ ಜವಾಬ್ದಾರಿಯಲ್ಲಿ ಸ್ವಲ್ಪ ಏನಾದರೂ ಹೊರುತ್ತಾರೆಯೇ? ಇಲ್ಲ. ಅವರು ತೆರಿಗೆ ತಪ್ಪಿಸಿ ಕಪ್ಪು ಹಣವನ್ನು ಬೆಳೆಸುತ್ತಾರೆ. ಇದು ಬಂಡವಾಳಶಾಹಿ ಆರ್ಥಿಕ ನೀತಿಯ, ಬಜೆಟ್ಟಿನ ನೆಲೆಗಟ್ಟು. ○

ಅಲ್ಲಲ್ಲಿ ಏನೇನು?

ತುಮಕೂರು: ಮಾ.5ರಂದು ಪಕ್ಷದ ಜಿಲ್ಲಾ ಸಮಿತಿ ಸಭೆ ತುಮಕೂರಿನಲ್ಲಿ

ಮಾ 6 ಹಾಗೂ 7ರಂದು ಪ್ರಾಂತ ರೈತ ಸಂಘದ ಜಿಲ್ಲಾಮಟ್ಟದ ತರಬೇತಿ ಶಿಬಿರ-ಕಾಂ. ಪಿ. ರಾಮಚಂದ್ರ ರಾವ್ ರವರು ಉಪನ್ಯಾಸ ನೀಡುವರು

ಬೆಂಗಳೂರು: ಮಾ.5,6 ಹಾಗೂ 7 ರಂದು ಪ್ರಾಂತ ರೈತ ಸಂಘದ ಜಿಲ್ಲಾ ಮಟ್ಟದ ತರಬೇತಿ ಶಿಬಿರ

ರಾಯಚೂರು: ಮಾ. 8 ರಂದು ಜಿಲ್ಲಾ ಮಟ್ಟದಲ್ಲಿ ಕೃಷಿ ಕಾರ್ಮಿಕರ ಸಮಾವೇಶ

ಮಾ.9 ಹಾಗೂ 10ರಂದು ಕೃಷಿ ಕಾರ್ಮಿಕ ಹಾಗೂ ರೈತಸಂಘದ ಕಾರ್ಯಕರ್ತರಿಗೆ ಜಿಲ್ಲಾ ಮಟ್ಟದ ತರಬೇತಿಶಿಬಿರ

ಬಿಜಾಪುರ: ಮಾ. 8 ರಂದು ಬಿಜಾಪುರ ಜಿಲ್ಲಾ ಡಿವೈಎಫ್‌ಐ ಸಮ್ಮೇಳನ.

ರಾಜ್ಯ ಬೀಡಿ ಕಾರ್ಮಿಕರ ಫೆಡರೇಷನ್

ಮಾ.11ರಂದು ತುಮಕೂರಿನಲ್ಲಿ ಕರ್ನಾಟಕ ರಾಜ್ಯ ಬೀಡಿ ಕಾರ್ಮಿಕರ ಕಾರ್ಯಕಾರಿ ಸಮಿತಿ ಸಭೆ.

ರಾಷ್ಟ್ರಪತಿಗಳ ಭಾಷಣ

[1ನೇ ಪುಟದಿಂದ]

ಯಿತು. ಐದನೇ ಯೋಜನೆಯ ನಂತರ 2.21ಕೋಟಿಯಿಂದ 6ನೇ ಯೋಜನೆಯಲ್ಲಿ 3ಕೋಟಿಯಾಗಿ ಈಗ ಅದು ಮತ್ತೂ ಹೆಚ್ಚಾಗಿದೆ. 1985ರವರೆಗೆ ಸುಶಿಕ್ಷಿತ ನಿರುದ್ಯೋಗಿಗಳ ಸಂಖ್ಯೆಯೇ 1.3 ಕೋಟಿ. ದಾಖಲೆ ಆಗದಿರುವ ಗ್ರಾಮಾಂತರ ಪ್ರದೇಶದಲ್ಲಿ ಅದು 6 ಕೋಟಿ ಮೀರಿದೆ. ಕೇಂದ್ರ ಸರಕಾರದ ಆಧುನೀಕರಣ, ಗಣಕೀಕರಣ ಹಾಗೆಯೇ ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಆಧುನೀಕರಣ ಕೈಗಾರಿಕೆಗಳ ನಿರ್ಮಾಣಕ್ಕೆ ಆಮಂತ್ರಣ ನೀಡುವಿಕೆಗಳಿಂದ ಈ ಸಂಖ್ಯೆ ಇನ್ನೂ ಹೆಚ್ಚಾಗುತ್ತದೆ. ಈ ನಿರುದ್ಯೋಗಿಗಳು, ಭಯೋತ್ಪಾದಕರಿಗೆ, ಜಾತೀವಾದಿಗಳಿಗೆ ಸುಲಭದಲ್ಲೇ ಬಲಿಯಾಗಿ, ವಿದೇಶಿ ಏಜಂಟರಾಗಿ ದೇಶದ ಸಮಗ್ರತೆ, ಐಕ್ಯತೆಗೆ ಮಾರಕ ಶಕ್ತಿಯಾಗುತ್ತವೆ ಎಂದು ತಿಳಿದು, ಕೈಗಾರಿಕೆಗಳನ್ನು ಉಳಿಸಿ, ಹೊಸ ಕೈಗಾರಿಕೆಗಳನ್ನು ಸ್ಥಾಪಿಸಿ, ನಿರುದ್ಯೋಗ ಸಮಸ್ಯೆ ಬಗೆಹರಿಸುತ್ತೇವೆಂದು ರಾಷ್ಟ್ರಪತಿ ಹೇಳಲಿಲ್ಲ. ಕಾರ್ಮಿಕರಲ್ಲಿ ಅಶಾಂತಿ ಬೆಳೆಯುತ್ತಿರುವಾಗ, ಕೈಗಾರಿಕಾ ಬಾಂಧವ್ಯದ ಪರಿಣಾಮವಾಗಿ ಮುಷ್ಕರ, ಬೀಗಮುದ್ರೆ ಮತ್ತು ಮಾನವ ದಿನಗಳ ನಷ್ಟ ಕಡಿಮೆಯಾಗಿದೆಂದು ಹೇಳಿರುವುದು ಸರಕಾರ ಪ್ರಕಟಮಾಡಿರುವ ಅಂಕೆ ಸಂಖ್ಯೆಗಳಿಗೆ ವ್ಯತಿರಿಕ್ತವಾಗಿದೆ.

ಮಾದರಿ ಮಾಲಕನಾಗಬೇಕಾಗಿರುವ ಕೇಂದ್ರ ಸರಕಾರ ಕಂಟ್ರಾಕ್ಟ್ ಪದ್ಧತಿಗೆ ಪ್ರೋತ್ಸಾಹ ನೀಡಿ, ದಿನಗೂಲಿ ಮಾಡುತ್ತಿರುವ ಕಾರ್ಮಿಕರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ನಿರಾಕರಿಸುತ್ತಿರುವುದು, ಬೆಲೆ ಹೆಚ್ಚಳಕ್ಕನುಸಾರವಾಗಿ ಹೆಚ್ಚು ತುಟ್ಟಿ ಭತ್ಯೆ ಕೊಡದಂತೆ ಪ್ರತಿಬಂಧ ಹೇರುತ್ತಿರುವುದು, ಕೋರ್ಟುಗಳ ನಿರ್ಣಯಗಳನ್ನು ಜ್ಯಾರಿಯಲ್ಲಿ ತರಲು ನಿರಾಕರಿಸುತ್ತಿರುವುದು ಕೈಗಾರಿಕೆಗಳಲ್ಲಿ ಸೌಹಾರ್ದತಾ ಬಾಂಧವ್ಯಕ್ಕೆ ಸಹಾಯಕವಾಗಿದೆಯೇ? ಅಲ್ಲಿ ತೃಪ್ತಿಪಡುವ ಅಂಶ ಯಾವುದು?

ವಿದೇಶಗಳ ಸಾಲದ ಭಾರ ಹೆಚ್ಚಾಗಿದೆ. ಅವುಗಳ ಬಡ್ಡಿ ತುಂಬುವುದು ನಮ್ಮ ಸರಕಾರದಿಂದ ಸಾಧ್ಯವಾಗುತ್ತಿಲ್ಲ. ಆ ಕಾರಣದಿಂದಾಗಿ ನಮ್ಮ ವಿದೇಶಿ ಧೋರಣೆಯಲ್ಲಿ, ನಮ್ಮ ಯೋಜನೆಗಳ ಕುರಿತು, ಅಭಿವೃದ್ಧಿ ಜನ ಕಲ್ಯಾಣ ಕಾರ್ಯಗಳ ಕುರಿತು ವಿಶ್ವಬ್ಯಾಂಕ್ ಹಾಗೆಯೇ ಸಾಲ ನೀಡುತ್ತಿರುವ ಸಾಮ್ರಾಜ್ಯಶಾಹೀ, ಬಂಡವಾಳಶಾಹಿ ದೇಶಗಳ ಕುರಿತು ನಾವು ಮೃದು ನಿಲುವು ತಾಳಬೇಕಾಗುತ್ತದೆ. ಕೆಲವು ಸಂದರ್ಭಗಳಲ್ಲಿ ನಮ್ಮ ನಿಲುವುಗಳನ್ನೇ ಬದಲಾವಣೆ ಮಾಡುವ ಸಂದರ್ಭಗಳೂ ಉಂಟಾಗುತ್ತಿವೆಂಬುದನ್ನು ರಾಷ್ಟ್ರಪತಿಗಳು ಮುಚ್ಚಿಟ್ಟಂತೆ ಕಂಡುಬರುತ್ತದೆ.

ಆಳುವ ವರ್ಗದ ಉಚ್ಚ ಅಧಿಕಾರಿಯಾದ ರಾಷ್ಟ್ರಪತಿಯವರು ಆಳುವ ವರ್ಗದ ಹಿತವನ್ನು ಆಳುವ ಸರಕಾರದ ನೀತಿಯನ್ನು ಸಮರ್ಥಿಸುವ ಶೇ.5 ಕ್ಕಿಂತ ಕಡಿಮೆ ಇರುವ ಶ್ರೀಮಂತ ಜನರಿಗೆ ಉದಾರ ರಿಯಾಯಿತಿಗಳನ್ನು ನೀಡಿ ಸಾಮಾನ್ಯ ಜನರನ್ನು ಹತ್ತಿಕ್ಕುವ ಮಾತನ್ನಾಡಿದ್ದಾರೆಯೇ ಹೊರತು ಬೇರೇನಲ್ಲ.

★★★★★★★★★★★★★★★★

ಐಕ್ಯರಂಗಕ್ಕೆ

ಚಂದಾದಾದಾರರಾಗಿರಿ

★★★★★★★★★★★★★★★★

ಉಪಗ್ರಹದಿಂದ ಸೇತುವೆ ನಿರ್ಮಾಣಕ್ಕೆ ಯೋಜನೆ

ಮಾಸ್ಕೋ [ಎ ಪಿಎನ್] :

ಬಾಹ್ಯಾಂತರಿಕ್ಷದಿಂದ ತೆಗೆದ ಛಾಯಾ ಚಿತ್ರಗಳು ತಾಜಿಕಿಸ್ತಾನದ ವಿಜ್ಞಾನಿಗಳು 800 ಮೀಟರ್ ಉದ್ದದ ಅಪೂರ್ವ ಸೇತುವೆಯೊಂದರ ನಿರ್ಮಾಣಕ್ಕೆ ನಿವೇಶನವನ್ನು ಆಯ್ದುಕೊಳ್ಳಲು ಸಹಾಯ ಮಾಡಿದೆ. ಸೋವಿಯೆತ್ ಒಕ್ಕೂಟದ ಪಾಮಿರ್ ಪ್ರದೇಶದಲ್ಲಿನ ಮಧ್ಯ ಏಶ್ಯಾದಲ್ಲೇ ಅತಿ ದೊಡ್ಡದಾದ ರೊಗ್ರನ್‌ಸ್ಕಾಯಾ ಜಲ ವಿದ್ಯುತ್ ಸ್ಥಾವರ ನಿರ್ಮಾಣ ಯೋಜನೆಯಲ್ಲಿ ಈ ಸೇತುವೆ ನಿರ್ಮಿಸಲ್ಪಡುವುದು.

ಭೂಮಿಯೊಳಗಣ ಕಂಪನ ಪ್ರಕ್ರಿಯೆಯ ಪರಿಣಾಮದಿಂದಾದ 30ಕ್ಕೂ ಹೆಚ್ಚು ಬಿರುಕುಗಳಿರುವುದನ್ನು ಹೊರಗೆಡಹಿತು. ಬಾಹ್ಯಾಂತರಿಕ್ಷ ಪರಿವೀಕ್ಷಣೆಯು ಅಪಾಯಕಾರಿ ಇಳಿಜಾರುಗಳು ಮತ್ತು ಭೂ ಕುಸಿತಗಳನ್ನು ಗುರುತಿಸಲೂ ಸಹಾಯ ಮಾಡಿತು.

(4ನೇ ಪುಟದಿಂದ)

ಗಳಿಗೆ ಓವರ್ ಡ್ರಾಫ್ಟ್ ನೀಡಬಾರದೆಂದು ರಿಸರ್ವ್ ಬ್ಯಾಂಕಿಗೆ ನಿರ್ಬಂಧಿಸಿದರು.

ಹೀಗಾಗಿ ಅನೇಕ ಬಾರಿ ರಾಜ್ಯಸರಕಾರದ ಚೆಕ್‌ಗಳು ರಿಸರ್ವ್ ಬ್ಯಾಂಕ್‌ನಿಂದ ವಾಪಸಾಗುತ್ತವೆ. ಸರಕಾರಿ ನೌಕರರು ಇತರ ನೌಕರರಿಗೆ ಸಂಬಳವೇ ಸಿಗದ ಪರಿಸ್ಥಿತಿ ಬರುತ್ತದೆ.

ಕೊನೆಗೆ ರಾಜ್ಯ ಸರಕಾರ ತಾನು ಕೈಗೊಳ್ಳುವ ಯೋಜನೆಗಳನ್ನು ಕೈಬಿಡಬೇಕಾಗುತ್ತದೆ ಜನ ಸೌಲಭ್ಯಗಳಿಲ್ಲದೆ ನರಳಬೇಕಾಗುತ್ತದೆ.

ಈ ವಾರ....

★ ಅಮೇರಿಕಾದಲ್ಲಿ ಮರಣ ದಂಡನೆಯೆಂಬುದು ಒಂದು "ಭಯಾನಕ ಲಾಟರಿ" ಆಗಿ ಬಿಟ್ಟಿದೆ. ಅಪರಾಧದ ಸನ್ನಿವೇಶಕ್ಕಿಂತ ಹೆಚ್ಚಾಗಿ ರಾಜಕೀಯ, ಹಣ, ಅಪರಾಧ ನಡೆದ ಜಾಗ ಹಾಗೂ ಜನಾಂಗ ಪಕ್ಷಪಾತವೇ ಆರೋಪಿಯನ್ನು ಗಲ್ಲಿನತ್ತ ಕಳುಹಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತಿವೆ

—ಅಮ್ನೆಸ್ಟಿ ಇಂಟರ್‌ನ್ಯಾಶನಲ್‌ನ ವರದಿ, ಫೆ.19

★ ಬಡವರ್ಗದ ಜನರು ಹೊರಗಡೆ ಕೆಲಸದ ಮೇಲೆ ಹೋಗಿದ್ದಾಗ ಅವರ ವಸತಿಗಳ ಮೇಲೆ ಎರಗಿ ಅವುಗಳಲ್ಲಿನ ಸಾಮಾನು ಸರಂಜಾಮು ಹೊರಹಾಕಿ ನೆಲಸಮ ಮಾಡುವ ಅಮಾನುಷ ಪರಂಪರೆ ರಾಜ್ಯದಲ್ಲಿ ನಿಂತಂತಿಲ್ಲ.... ಬೆಂಗಳೂರು ನಗರ ಪಾಲಿಕೆ 1985ರ ಅಂತ್ಯದಲ್ಲಿ ಕೊಳಗೇರಿ ನಿವಾಸಿಗಳಿಗಾಗಿ 243 ಲಕ್ಷ ರೂ.ಗಳ ಒಂದು ಬೃಹತ್ ಯೋಜನೆ ಅಂಗೀಕರಿಸಿತ್ತು. ಆದರೆ ಈ ಯೋಜನೆ ಏನಾಯಿತು ?:

ಪ್ರಜಾವಾಣಿ, ಫೆ.23

★ ಭಾರತದ ರಾಜಧಾನಿಯಲ್ಲಿ ಹಾಡು ಹಗಲೇ 2300 ಮಂದಿ ಕೊಲೆಯಾದರು. ಸಾವಿರಾರು ಮಂದಿ ಗಲಭೆ ನಡೆಸಿದರು ಅಪರಾಧದಲ್ಲಿ ತೊಡಗಿದ್ದರೆಂದು 2000 ಮಂದಿಯ ವಿರುದ್ಧ ಅಫಿಡವಿಟ್ ಸಲ್ಲಿಸಲಾಯಿತು ಎಂದಿದೆ ಆಯೋಗ. ಕೆಲವು ಮೊಕದ್ದಮೆಗಳು ನಡೆದಿವೆ. ಯಾರನ್ನೂ ಇದುವರೆಗೆ ಶಿಕ್ಷಿಸಿಲ್ಲ ತೀರ್ಪು ನೀಡುವುದು ಕಷ್ಟವೆನ್ನುತ್ತಿದೆ ಆದು. ಹೀಗ ದಕ್ಕೆ, ನಮ್ಮದೊಂದು ನ್ಯಾಯಪೂರ್ಣ ಸಮಾಜ ಎಂದು ನಮ್ಮ ಸಹ ನಾಗರೀಕರನ್ನು ಒಪ್ಪಿಸುವುದು ಸಾಧ್ಯವೇ?

-ಮಿಶ್ರಾ ಆಯೋಗ್ಯದ ವರದಿ ಕುರಿತು "ಇಂಡಿಯನ್ ಎಕ್ಸ್‌ಪ್ರೆಸ್" ಫೆ.25

★ ಜೂನ್ 1986ರವರೆಗೆ ಸಂಘಟಿತ ಆರ್ಥಿಕ ವಲಯದಲ್ಲಿ ಉದ್ಯೋಗಾವಕಾಶದಲ್ಲಿ 1.6ಶೇಖಡ ಹೆಚ್ಚಳವಾದರೆ, ಅದೇ ಅವಧಿಯಲ್ಲಿ ಉದ್ಯೋಗ ವಿನಿಮಯ ಕಛೇರಿಗಳಲ್ಲಿ ದಾಖಲಾದ ಉದ್ಯೋಗಾರ್ಥಿಗಳ ಸಂಖ್ಯೆ 14.2 ಶೇಖಡದಷ್ಟು ಹೆಚ್ಚಿತು.

1986-87ರ ಭಾರತ ಸರ್ಕಾರದ "ಆರ್ಥಿಕ ಸಮೀಕ್ಷೆ" ಯಿಂದ

★ ಆರ್ಥಿಕದ ಶೇಕಡಾ 5ರಷ್ಟು ಬೆಳವಣಿಗೆ ದರದಲ್ಲಿಯೇ ತೃಪ್ತಿ ಕಾಣುವುದೆಂದರೆ ಮುಂದುವರಿಯುತ್ತಿರುವ ಬಡತನ, ಪ್ರಾದೇಶಿಕ ಅಸಮತೋಲ ಮತ್ತು ಒಂದೊಮ್ಮೆ ಕ್ರಿಯಾಶೀಲ-ವಾಗಿದ್ದ ವಲಯಗಳಲ್ಲಿ ಉಂಟಾಗಿರುವ ಸ್ಥಗಿತತೆಯನ್ನು ಕಡೆಗಣಿಸಿದಂತೇನೇ. ಸಮಸ್ಯೆಗಳು ಗೊತ್ತಿಲ್ಲವೇನಲ್ಲ ಆದರೆ ಅವನ್ನು ಆಶಾವಾದದ ಲೇಪನದಿಂದ ಮರೆಮಾಚಲು ಏಕೆ ಪ್ರಯತ್ನಿಸಲಾಗುತ್ತಿದೆ ಎಂದು ವಿವರಿಸಲು ಆಗುತ್ತಿಲ್ಲ.

—ಆರ್ಥಿಕ ಸಮೀಕ್ಷೆ ಕುರಿತು ಡೆಕ್ಕನ್ ಹೆರಾಲ್ಡ್, ಫೆ.26

Printed & Published by P. Ramachandra Rao on behalf of the Communist Party of India [Marxist] Karnataka State Committee
K. V. Temple Street, Sultanpet, Bangalore-560053
Sultanpet B-53 Phone : 75331
Editorial and Managerial Office : L-56, K. V. Temple Street,
Editor P. Ramachandra Rao
Managing Editor : N.K. Upadhyaya